Further also they have mentioned as follows :

> "He has also assured today that no disciplinary action will be taken against any of the Reporters or Recording Officers".

ಈ ತರಹ ಹೇಳಿದ್ದಾರೆ. ಇದನ್ನು ಅವರು ಪ್ರೆಸ್‌ಗೂ ಕೂಡಾ ಕೊಡಬಹುದು. ನಾನು ೩೧ಕ್ಕೆ ಮೀಟಿಂಗ್ ಕರೆಯುತ್ತೇನೆಂದು ಅಪ್ಯೂರೆನ್ಸ್ ಕೊಟ್ಟಿದ್ದೇನೆ. ನಾನು ಏನು ಹೇಳಿದ್ದೇನೆ ಎಂದರೆ ಸ್ಪೆಷಲ್ ಬೋರ್ಡ್ ಮೀಟಿಂಗ್ ಕರೆಯುತ್ತೇನೆ, ತಮ್ಮನ್ನೂ ಕರೆಯುತ್ತೇನೆ ಅವರ ಡಿಮ್ಯಾಂಡ್ಸ್ ಯೋಗ್ಯ ಇದೆಯೇ ಇಲ್ಲವೇ ಎಂಬುದನ್ನು ಕೇಳಿಕೊಂಡು ವಿಚಾರ ಮಾಡುತ್ತೇನೆ ಎಂದು ಹೇಳಿದ್ದೇವೆ. ಹಿಂದೆ ಅಸೆಂಬ್ಲಿ ಮುಗಿದ ತಕ್ಷಣ ಮಾಡುತ್ತೇನೆ ಎಂದು ಹೇಳಿದ್ದೆ. ಇದಿಷ್ಟೇ, ಕೆಲಸಕ್ಕೆ ಬರುತ್ತೇವೆ ಎಂದರೆ, ಒಳ್ಳೆಯದು ಎಂದು ಹೇಳಿದೆ. ಇವತ್ತು ಏನು ಹೇಳುತ್ತಾರೆ ಎಂದರೆ, ೩೧ನೇ ತಾರೀಖು ಮಾಡುತ್ತೇವೆ ಎಂದು ಚೇರ್ಮನ್ ಹಾಗೂ ಸ್ಪೀಕರ್ ಅಪ್ಯೂರೆನ್ಸ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ಹಾಗೆ ಇಲ್ಲ. ಡಿಸಿಪ್ಲೀನರಿ ಆಕ್ಷನ್ ನಾವು ಏನೂ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ, ಅದರ ಬಗ್ಗೆ ಕೂಡಾ ಅಪ್ಯೂರೆನ್ಸ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದೂ ಕೂಡಾ ಹಾಗಿಲ್ಲ. ಡಿಸಿಪ್ಲೀನರಿ ಆಕ್ಷನ್ ತೆಗೆದುಕೊಳ್ಳುವುದು ಬಿಡುವುದು ನಮಗೆ ಬಿಟ್ಟಿದ್ದು. ಒಂದು ವೇಳೆ ಅವರು ನಮಗೆ ಬಂದು ಹೇಳಿಕೊಂಡರೂ, ಮಾಡಿಕೊಂಡರೂ ಆಂದರೆ ವಿಚಾರ ಮಾಡೋಣ. ಸದಸ್ಯರಿಗೆ ತಪ್ಪು ಕಲ್ಪನೆ ಆಗಬಾರದು ಎಂದು ಹೇಳುತ್ತಿದ್ದೇನೆ. ಅಸೆಂಬ್ಲಿ ಒಳಗೆ ತಮ್ಮೆದುರಿಗೆ ಏನು ಹೇಳಿದ್ದೇನೆ ಅದೇ ಕರೆಕ್ಟ್, ನಾನು ಈ ರೀತಿ ಹೇಳಿಲ್ಲ. ಅನ್‌ಕಂಡೀಷನಲ್ ಆಗಿ ಸಭೆಗೆ ಅಗೌರವ ಆಗಿದ್ದರ ಬಗ್ಗೆ ಕ್ಷಮೆ ಬೇಡುತ್ತೇವೆ ಎಂದು ಹೇಳಿದರು, ಆಗಬಹುದು ಎಂದು ಹೇಳಿದೆ, ಡ್ಯೂಟಿಗೆ ಹಾಜರಾಗುತ್ತೇವೆಂದು ಹೇಳಿದರು, ಆಗಬಹುದು ಎಂದು ಹೇಳಿದೆ.

ಮಾನ್ಯ ಬಂಗಾರಪ್ಪನವರೇ ದಯವಿಟ್ಟು ತಾವು ಮಾತನಾಡಿ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದನಾಯಕರು).—ಮಾನ್ಯ ಸಭಾಧ್ಯಕ್ಷರೇ, ಈ ಜನವರಿ ೨೧ರಂದು ಮಾಡಿರತಕ್ಕಂಥ ರಾಜ್ಯಪಾಲರ ಭಾಷಣದ ವಿಷಯದಲ್ಲಿ, ಮಾನ್ಯ ಸದಸ್ಯರಾದಂಥ ಹೆಚ್. ಟಿ. ಕೃಷ್ಣಪ್ಪನವರು, ರಾಜ್ಯಪಾಲರಿಗೆ ಅಭಿನಂದನೆಯನ್ನು ಸಲ್ಲಿಸುವ ನಿರ್ಣಯವನ್ನು ಮಂಡಿಸಿದ್ದಾರೆ. ಅದನ್ನು ಮಾನ್ಯ ಸದಸ್ಯರಾದಂಥ ಕೊಟ್ರಪ್ಪನವರ ಅನುಮೋದನೆ ಮಾಡಿ ಈ ವಿಷಯವನ್ನು ಚರ್ಚೆಗಾಗಿ ಈ ಸದನಕ್ಕೆ ಒಪ್ಪಿಸಿದ್ದಾರೆ. ಮಾನ್ಯ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣವನ್ನು ನಾನು ವಿರೋಧಿಸಿ ಮಾತನಾಡುತ್ತಿದ್ದೇನೆ. ಅದಕ್ಕೆ ಕಾರಣಗಳು ಹತ್ತಾರು ಇರುತ್ತವೆ, ರಾಜ್ಯಪಾಲರ ಭಾಷಣ ಎನ್ನತಕ್ಕಂಥ ಮಾತನ್ನು ನಾವು ಈ ಪುಸ್ತಕದ ಮೇಲೆ ಮಾಡಿರತಕ್ಕಂಥ ಅಚ್ಚಿನಿಂದ ನೋಡಿದಾಗ ಮಾತ್ರ, ಇಲ್ಲಿ ರಾಜ್ಯಪಾಲರು ಮಾಡಿರತಕ್ಕ ಭಾಷಣ ನಮ್ಮ ಕಣ್ಣೆದುರಿಗೆ ನಡೆದಾಗ ಮಾತ್ರ, ಸಹಜವಾಗಿ ಈ ಭಾಷಣವನ್ನು ಸಿದ್ಧಮಾಡಿರತಕ್ಕಂಥವರು ಮತ್ತು ಮಾತನಾಡಿರತಕ್ಕಂಥವರು, ಮಾಡಿರತಕ್ಕಂಥವರು ಒಬ್ಬರೇ ಎಂಬ ಭಾವನೆ ಸಹಜವಾಗಿ ನಮ್ಮಲ್ಲಿ ಬರುತ್ತದೆ. ನಿಜ ಕೆಲವೊಮ್ಮೆ ಮುಖ್ಯಮಂತ್ರಿಗಳ ಉದ್ಘಾಟನಾ ಭಾಷಣ ಇದ್ದಾಗ, ಮತ್ತೊಬ್ಬರು ಹೋಗಿ ಓದಿಬರತಕ್ಕಂಥಾದ್ದು ಇದೆ ಈ ದೇಶದಲ್ಲಿ. ಮತ್ತೊಬ್ಬ ಮಾನ್ಯ ಮಂತ್ರಿಯವರ ಪರವಾಗಿಮತ್ತೊಬ್ಬ ಮಾನ್ಯ ಮಂತ್ರಿಗಳು ಹೋಗಿ ಭಾಷಣ ಮಾಡಬಹುದುಒಬ್ಬ ವ್ಯಕ್ತಿಗೆ ಬದಲಿಗೆ ಮತ್ತೊಬ್ಬ ವ್ಯಕ್ತಿ ಹೋಗಿಭಾಷಣ ಮಾಡಬಹುದು. ಸುಮಾರಾಗಿ ಅದೇ ಧಾಟಿಯನ್ನು ಅನುಸರಿಸಿರತಕ್ಕಂಥ ಭಾಷಣ ಇದು. ನಿಮ್ಮ ಕಾಲದಲ್ಲಿ ಇದು ಪ್ರಾರಂಭವಾಯಿತು ಎಂದು ನಾನು ಅನ್ನುವುದಿಲ್ಲ. ಅದು ಒಂದು ಪದ್ಧತಿ, ವಾಡಿಕೆ. ಕಾನೂನು ಬದ್ಧವಾಗಿಯೂ ಈ ಭಾಷಣವನ್ನು ಸಿದ್ಧಮಾಡಿರತಕ್ಕಂಥವರು ರಾಜ್ಯಪಾಲರು ಅಲ್ಲವೇ ಅಲ್ಲ, ಈ ಭಾಷಣ ಬರೆದು ಸಿದ್ಧ ಮಾಡಿ ಕೊಟ್ಟವರು ಸರಕಾರದವರು ಇವರೇ ಇದನ್ನು ಸಂಪೂರ್ಣವಾಗಿ ಬರೆದು ಅಕ್ಷರ ಎಲ್ಲ ನೋಡಿ ಎಲ್ಲಿ ಕಾಮ ಬರಬೇಕು ಎಲ್ಲಿ ಫುಲ್‌ಸ್ಟಾಪ್ ಬರಬೇಕು. ಈ ವಿಚಾರ ಹೇಳಬೇಕು, ಇದು ಬೇಡ ಇದು ತಾಪತ್ರಯವಾಗುತ್ತದೆ, ಇದನ್ನು ತೆಗೆದುಬಿಡಿ, ಈ ಒಂದು ಪ್ಯಾರಾದಲ್ಲಿ ಇದು ಬೇಡ, ಹೊಡೆದು

ಹಾಕಿ ಇವೆಲ್ಲಾ ವಿಷಯಗಳನ್ನು ಕೂಡಾ ಅಂತಿಮವಾಗಿ ನಿರ್ಧರಿಸಿ, ಅಂಕಿತಕ್ಕೆ ಕಳುಹಿಸಲಾಗುತ್ತದೆ. ಇದನ್ನು ಮಂತ್ರಿಮಂಡಲ ತೀರ್ಮಾನ ಮಾಡುತ್ತದೆ. ಇದು ನಿಮಗೆಲ್ಲಾ ಗೊತ್ತಿರುವ ವಿಚಾರ. ಯಾವ ಭಾಷಣವನ್ನು ರಾಜ್ಯ ಸರಕಾರ ಸಿದ್ಧಮಾಡುತ್ತದೆ, ಅದನ್ನು ಓದತಕ್ಕಂಥ ಸಂವಿಧಾನ ಬದ್ಧವಾಗಿರ ತಕ್ಕಂಥ ಕಾರ್ಯ ರಾಜ್ಯಪಾಲರದ್ದು ಅಷ್ಟೇ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ನಿಮ್ಮ ಕಾಲದಲ್ಲೂ ಇದೇ ರೀತಿ ಇತ್ತು

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದೂ ಅಷ್ಟೇ

ಅಧ್ಯಕ್ಷರು.—ನಾನು ಆಗಲೇ ಹೇಳಿದೆ, ಇವರು ಮಾತನಾಡುವಾಗ ನೀವು ಇಂಟರ್‌ಫಿಯರ್ ಆಗಬಾರದು, ಅವರು ಮಾತನಾಡುವಾಗ ನೀವು ಇಂಟರ್‌ಫಿಯರ್ ಆಗಬಾರದು ಎಂದು.

ಶ್ರೀ ಎಸ್. ಬಂಗಾರಪ್ಪ.—ನಾನು ಮೊದಲೇ ಹೇಳಿದೆ ನಮ್ಮ ಬೀರೂರು ಶಾಸಕರಿಗೆ. ನೀವೇ ಇದನ್ನು ಪ್ರಾರಂಭ ಮಾಡಿದ್ದೀರಿ ಎಂದು ನಾನು ಹೇಳುವುದಿಲ್ಲ. ಮೊದಲಿನಿಂದಲೂ ಇದೇ ಇದೆ ಎಂದು ಹೇಳಿದೆ. ಇದನ್ನು ನಾನು ಪೀಠಿಕೆಯಲ್ಲೇ ಸೇರಿಸಿರುತ್ತೇನೆ. ಸ್ವಲ್ಪ ಆಲಿಸಬೇಕಷ್ಟೇ.

ಮಾನ್ಯ ಅಧ್ಯಕ್ಷರೇ, ನಾವು ಇವೊತ್ತು ರಾಜ್ಯಪಾಲರ ಭಾಷಣದ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದರೆ ಹಾಗೂ ಇದರಲ್ಲಿರುವಂತಹ ಒಳ್ಳೆಯದನ್ನು ಸ್ವಾಗತ ಮಾಡಬೇಕಾದರೆ, ಇದರ ಒಂದು ಹಿನ್ನೆಲೆಯನ್ನು ನಾವು ನೋಡಬೇಕಾಗುತ್ತದೆ. ‘ಕರ್ನಾಟಕ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣ’’ ಎಂದು ಇಲ್ಲಿ ತಲೆಬರಹವಿದ್ದರೂ ಸಹ ಇದು ಸರ್ಕಾರವೇ ಸಿದ್ಧಪಡಿಸಿದಂಥ ಭಾಷಣವಾಗಿದೆ. ನಾನು ಮೊದಲೇ ಹೇಳಿದಂತೆ, ಇದು ರಾಜ್ಯಪಾಲರ ಭಾಷಣವಾಗಿದ್ದರೂ ಸಹ, ಇದರಲ್ಲಿರುವಂತಹ ಸಂಪೂರ್ಣ ವಿವರಗಳನ್ನು ಸರ್ಕಾರವೇ ಒದಗಿಸಿದೆ. ಇದು ಸರ್ಕಾರದ ಅಭಿಪ್ರಾಯಗಳನ್ನು ಒಳಗೊಂಡಂಥ ಭಾಷಣ ಆಗಿರುವುದರಿಂದ, ಆಗಿರುವಂತಹ ತಪ್ಪುಗಳಿಗೆಲ್ಲಾ ನಾವು ನೇರವಾಗಿ ಈ ಸರ್ಕಾರವನ್ನೇ ಗುರಿಪಡಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಬರಗಾಲದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಸಾಕಷ್ಟು ಸಮಯವನ್ನು ನಾವು ಈಗಾಗಲೇ ಇದಕ್ಕಾಗಿ ಬಳಸಿದ್ದೇವೆ. ಆದ್ದರಿಂದ ನಾನು ಮತ್ತೊಮ್ಮೆ ಬರಗಾಲದ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಬರಗಾಲದ ಬಗ್ಗೆ ಈಗಾಗಲೇ ನಮ್ಮ ಪಕ್ಷದ ಸದಸ್ಯರು ಹಾಗೂ ವಿರೋಧಪಕ್ಷದ ಸದಸ್ಯರು ಸಾಕಷ್ಟು ಹೇಳಿದ್ದಾರೆ. ಇವರೆಲ್ಲರೂ ಕೊಟ್ಟಂತಹ ಅಭಿಪ್ರಾಯಗಳನ್ನು ನಾನು ಅನುಮೋದಿಸುತ್ತೇನೆ. ಈ ಸಮಯದಲ್ಲಿ ಬರಗಾಲದ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಮಾಡುವಂತಹ ಭಾಷಣ ಏನಿದೆ, ಅದು ಈ ಸರ್ಕಾರ ಮುಂದಿನ ವರ್ಷದಲ್ಲಿ ಯಾವಯಾವ ಹೊಸಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಮತ್ತು ಈ ಬಗ್ಗೆ ಸರ್ಕಾರದ ನೀತಿ ಏನಿದೆ ಎಂಬುದನ್ನು ನಿರೂಪಿಸಬೇಕು. ಈ ಸರ್ಕಾರದ ಪಾಲಿಸಿ ಮ್ಯಾಟರ್ಸ್ ಅಂದರೆ, ಅದು ಯೋಜನೆಗಳಲ್ಲಿ ಬರುವಂತಹ ಕೆಲಸಗಳಾಗಿರಬಹುದು, ನೀರಾವರಿ ಯೋಜನೆಗಳಾಗಿರಬಹುದು, ವಿದ್ಯುತ್ ಉತ್ಪಾದನೆ ಆಗಿರಬಹುದು ಹಾಗೂ ಇನ್ನಿತರ ಬಾಬುಗಳಿರಬಹುದು, ಇದಕ್ಕೆಲ್ಲಾ ಇವರು ಯಾವ ರೀತಿ ಆದ್ಯತೆ ಕೊಟ್ಟಿದ್ದಾರೆ ಮತ್ತು ಈ ಅಭಿವೃದ್ಧಿ ಕೆಲಸಗಳ ಮೂಲಕ ನಮ್ಮ ಕರ್ನಾಟಕ ರಾಜ್ಯವನ್ನು ಅಭ್ಯುದಯದ ದಾರಿಯಲ್ಲಿ, ಬೆಳವಣಿಗೆಯ ದಾರಿಯಲ್ಲಿ ತೆಗೆದುಕೊಂಡು ಹೋಗಲು ಯಾವ ರೀತಿಯ ಪ್ರಯತ್ನ ಮಾಡಿದ್ದಾರೆಂಬುದನ್ನು ಇದರಲ್ಲಿ ಕಾಣಿಸಬೇಕಾಗುತ್ತದೆ. ನಮ್ಮ ರಾಜ್ಯ ಹೆಚ್ಚಿನ ಅಭಿವೃದ್ಧಿ ಹೊಂದಬೇಕಾದರೆ ಮುಖ್ಯವಾಗಿ ನಾವು ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಕಳೆದ ಸಲ ನಮ್ಮ ವಾರ್ಷಿಕ ಯೋಜನೆಯ ವೆಚ್ಚ ೬೩೧ ಇಲ್ಲವೇ ೬೫೧ ಕೋಟಿ ರೂಪಾಯಿಗಳಿದ್ದರೆ, ಆ ಹಣದಲ್ಲಿ ನಮ್ಮ ನೀರಾವರಿ ಯೋಜನೆಗಳಿಗೆ ಮತ್ತು ವಿದ್ಯುತ್ ಉತ್ಪಾದನೆ ಬಾಬಿಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ ಮತ್ತು ನಮ್ಮ ರಾಜ್ಯವನ್ನು ಅಭ್ಯುದಯದ ದಾರಿಯಲ್ಲಿ ಯಾವ ರೀತಿ ತೆಗೆದುಕೊಂಡು ಹೋಗಿದ್ದೇವೆ ಎಂಬುದನ್ನು ಇದರಲ್ಲಿ ತಿಳಿಸಬೇಕಾಗಿತ್ತು. ಇದರಲ್ಲಿ ಹೆಚ್ಚಿನ ವಿವರಗಳು ಇಲ್ಲದ ಕಾರಣ ನಾವು ಈ ಹಂತದಲ್ಲಿ ವಿವರವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಯವ್ಯಯ ಪತ್ರದ ಮಂಡನೆಯ ನಂತರ ಇದನ್ನು ವಿವರವಾಗಿ ಚರ್ಚೆ ಮಾಡಬಹುದಾಗಿದೆ. ಈ ಜನತಾ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ೧೯೮೩ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂತು. ೧೯೮೩, ೧೯೮೪ ಮತ್ತು ೧೯೮೫ನೇ ಸಾಲುಗಳಲ್ಲಿ ಈ ಸರ್ಕಾರ ತನ್ನ ನೀತಿ ನಿರೂಪಣೆಯನ್ನು

ರಾಜ್ಯಪಾಲರ ಭಾಷಣದ ಮೂಲಕ ನಮಗೆ ತಿಳಿಸಿದೆ. ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಯಾವ ಪಕ್ಷ ಬಹುಮತ ಪಡೆಯಿತೋ, ಅದು ಅಧಿಕಾರಕ್ಕೆ ಬಂತು. ಈಗ ಯಾವ ಪಕ್ಷದ ಸರ್ಕಾರ ಅಧಿಕಾರ ನಡೆಸುತ್ತಿದೆಯೋ ಅದು ಚುನಾವಣೆಯ ಸಂದರ್ಭದಲ್ಲಿ ಜನತೆಗೆ ಏನು ಭರವಸೆಗಳನ್ನು ಕೊಟ್ಟಿತ್ತೋ, ಅದನ್ನು ಅಧಿಕಾರಕ್ಕೆ ಬಂದಮೇಲೆ ಈಡೇರಿಸಲು ಗಮನ ಕೊಟ್ಟಿದೆಯೋ ಎಂಬುದು ಇಲ್ಲಿ ನಮಗೆ ಮುಖ್ಯ. ಇಲ್ಲಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಮೂಲ ಭೂಮಿಕೆ ಎಂದರೆ, ಯಾವ ಪಕ್ಷ ಚುನಾವಣೆಯಲ್ಲಿ ಬಹುಮತ ಪಡೆದು ಸರ್ಕಾರ ರಚನೆ ಮಾಡುತ್ತದೋ, ಅದು ಚುನಾವಣೆ ಕಾಲದಲ್ಲಿ ಜನತೆಗೆ ಏನು ಹೇಳಿರುತ್ತದೆ ಎಂಬುದು ಮುಖ್ಯವಾದದು. ೧೯೭೮ರ ಮಾರ್ಚಿ ತಿಂಗಳಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಜನತೆಗೆ ಏನೇನು ಭರವಸೆ ಕೊಡಲಾಗಿತ್ತು ಎಂಬುದರ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಆದರೆ ಚುನಾವಣೆ ಸಂದರ್ಭದಲ್ಲಿ ಜನತಾ ಪಕ್ಷ ಜನತೆಗೆ ಏನು ಮಾತು ಕೊಟ್ಟಿತ್ತು ಎಂಬುದು ಇಲ್ಲಿ ಮುಖ್ಯವಾದುದು. ಆದ್ದರಿಂದ ಇವರು ಜನತೆಗೆ ಕೊಟ್ಟ ಮಾತನ್ನು ಮತ್ತು ಭರವಸೆಗಳನ್ನು ಯಾವ ರೀತಿ ಈ ರಾಜ್ಯಪಾಲರ ಭಾಷಣದ ಮೂಲಕ ಈಡೇರಿಸಿದ್ದಾರೆಂಬುದನ್ನು ನಾವು ನೋಡಬೇಕಾಗುತ್ತದೆ. 'ನಡೆನುಡಿ' ಎಂಬ ಪತ್ರಿಕೆಯಲ್ಲಿ ಈ ಜನತಾ ಪಕ್ಷದ ವಿಜಯದ ಬಗ್ಗೆ ಒಂದು ಮಾತನ್ನು ಬರೆದಿದ್ದಾರೆ. ಅದೇನೆಂದರೆ, ಈ ಜನತಾಪಕ್ಷದ ವಿಜಯದ ಹಿಂದೆ ಆದರ್ಶ ಯುವಕರು, ಮಹಿಳೆಯರು ಮತ್ತು ರೈತರು ಇದ್ದರು ಎಂದು. ಚುನಾವಣೆಯ ಸಂದರ್ಭದಲ್ಲಿ ಈ ಜನತಾ ಪಕ್ಷದವರು ರಾಜ್ಯದ ನಾನಾ ವರ್ಗದ ಜನತೆಗೆ ನಾನಾ ರೀತಿಯ ಭರವಸೆಗಳನ್ನು ಕೊಟ್ಟಿದ್ದರು. ಆ ಸಂದರ್ಭದಲ್ಲಿ ಇವರು ರೈತರಿಗೆ ಕೊಟ್ಟಿದ್ದ ಭರವಸೆಗಳನ್ನು ಯಾವ ರೀತಿ ಈಡೇರಿಸಿದ್ದಾರೆ ಮತ್ತು ಅವರ ಸಮಸ್ಯೆಗಳನ್ನು ಯಾವ ರೀತಿ ಪರಿಹರಿಸಿದ್ದಾರೆಂಬುದನ್ನು ನಾವು ಸ್ವಲ್ಪ ನೋಡಬೇಕಾಗುತ್ತದೆ. ೧೯೭೭ರಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಹಾಗು ೧೯೭೮ರಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಇವರು ರೈತರ ಬೆಂಬಲ ಪಡೆದು ಅಧಿಕಾರಕ್ಕೆ ಬಂದಮೇಲೆ, ಅವರ ಬಗ್ಗೆ ಯಾವ ರೀತಿ ನಡೆದುಕೊಂಡಿದ್ದಾರೆಂಬುದು ಇಲ್ಲಿ ಮುಖ್ಯ. ಇವರು ರೈತರನ್ನು ಕಳೆದ ಹತ್ತು ತಿಂಗಳಲ್ಲಿ ಯಾವ ರೀತಿ ಕಡೆಗಣಿಸಿದ್ದಾರೆಂಬುದಕ್ಕೆ ನಾನಾ ರೀತಿಯ ಉದಾಹರಣೆಗಳನ್ನು ಕೊಡಬಹುದು. ಇದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ರೈತರ ಬಗ್ಗೆ ಇವರು ತಳೆದಂಥ ಧೋರಣೆಗಳನ್ನು ಕರ್ನಾಟಕ ರಾಜ್ಯದ ಎಲ್ಲ ರೈತರು ಬಹಳವಾಗಿ ವಿರೋಧ ಮಾಡಿದ್ದಾರೆ. ಈ ರೀತಿ ವಿರೋಧ ವ್ಯಕ್ತಪಡಿಸಿದ್ದು ಶ್ರೀ ಸಂಕ್ರಿಕೊಪ್ಪ ಅವರ ನೇತೃತ್ವದ ರೈತರ ಸಂಘ ಅಲ್ಲ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿರುವಂತಹ ಶ್ರೀ ರೇವಣ್ಣಸಿದ್ದಪ್ಪನವರ ಮುಖಂಡತ್ವದಲ್ಲಿರುವಂತಹ ರೈತರ ಸಂಘವೂ ಅಲ್ಲ. ಹೆಚ್ಚು ಕಡಿಮೆ ಇವೆರಡೂ ಸಹ ಒಂದೇ ಎಂದು ಹೇಳಬಹುದು. ಇವರಿಬ್ಬರೂ ಸ್ಥಾಪನೆ ಮಾಡಿದಂಥ ರೈತರ ಸಂಘಗಳು ಈ ಸರ್ಕಾರವನ್ನು ಹಾಗೂ ಇವರ ನೀತಿಯನ್ನು ವಿರೋಧ ಮಾಡಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ರೆಕ್ಕೆಪುಕ್ಕ ಬಲಿತಿರುವಂತಹ ಒಂದು ಬಲವಾದ ರೈತರ ಸಂಘವಿದೆ. ಇದರಲ್ಲಿ ಶ್ರೀ ಎಚ್. ಎಸ್. ನಂಜುಂಡಸ್ವಾಮಿ, ಶ್ರೀ ಎನ್. ಡಿ. ಸುಂದರೇಶ್ ಅವರುಗಳು ಇದ್ದಾರೆ. ಇವರ ಒಂದು ಸಂಘ ಬಿಟ್ಟರೆ ಇನ್ನಿತರ ರೈತರ ಸಂಘಗಳು ಕೇವಲ ತುಪ್ಪಟ ಇದ್ದಂತೆ ಇವೆ ಎಂದು ಹೇಳಬಹುದು. ಇವೆಲ್ಲಾ ಇನ್ನೂ ಎಳೆಯ ಗರಿಗಳಂತೆ ಇವೆ. ಶ್ರೀ ರೇವಣ್ಣಸಿದ್ದಪ್ಪನವರ ಮತ್ತು ಶ್ರೀ ಸಂಕ್ರಿಕೊಪ್ಪ ಅವರುಗಳು ರೈತರ ಬಗ್ಗೆ ಮಾಡುವಂತಹ ಭಾಷಣಗಳನ್ನು ನಾವು ಕೇಳಿದ್ದೇವೆ. ಇತ್ತೀಚೆಗೆ ಶ್ರೀ ಎಚ್. ಎಸ್. ರುದ್ರಪ್ಪನವರ ಅಧ್ಯಕ್ಷತೆಯಲ್ಲಿರುವಂತಹ ರೈತರ ಸಂಘದವರು ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿ ಒಂದು ದೊಡ್ಡ ರೈತರ ಮೇಳವನ್ನು ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ಅನೇಕ ಸಾವಿರ ಜನರು ಅಲ್ಲಿಗೆ ಬಂದಿದ್ದರು. ಆ ಸಂದರ್ಭದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಲು ವಿವಿಧ ಪಕ್ಷಗಳ ರಾಜಕೀಯ ಮುಖಂಡರನ್ನು ಅವರು ಆಹ್ವಾನಿಸಿದ್ದರು. ನಮ್ಮ ಪಕ್ಷದವರನ್ನು ಸಹ ಕರೆದಿದ್ದರು. ಆಗ ನಾವು ಸಹ ಅಲ್ಲಿಗೆ ಹೋಗಿ ಭಾಷಣ ಮಾಡಿದೆವು. ಆ ಮೇಳಕ್ಕೆ ಮಂತ್ರಿಗಳು ಯಾರು ಬರಲಿಲ್ಲ. ಈ ಸರ್ಕಾರದವರು ಸಹಕಾರಿ ಸಂಘಗಳ ಕಾನೂನನ್ನು ತಿದ್ದುಪಡಿ ಮಾಡಿ ಒಂದು ಆಜ್ಞೆ ಹೊರಡಿಸಿದ್ದಾರೆ. ಇದರ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಸಹಕಾರಿ ಸಂಘದ ಸೆಕ್ಷನ್ ೧೦೧ನೇ ಕಲಂ(ಸಿ) ಪ್ರಕಾರ ಯಾವ ರೈತರ ಸಹಕಾರಿ ಸಂಘದ ಮೂಲಕ ತೆಗೆದುಕೊಂಡ ಸಾಲವನ್ನು ವಾಪಸ್ ಮಾಡಿರುವುದಿಲ್ಲವೋ, ಅಂತಹವರ ಆಸ್ತಿಯನ್ನು ಹರಾಜ್ ಮಾಡಿ, ಅದನ್ನು ಸರ್ಕಾರವೇ ಸ್ವಾಧೀನ ಪಡಿಸಿಕೊಳ್ಳುವಂತಹ ಒಂದು ಕರಾಳ ಶಾಸನವನ್ನು ಮಾಡಿದ್ದಾರೆ. ಇಂತಹ ಒಂದು ಕರಾಳ ಶಾಸನವನ್ನು ಈ ಹಿಂದೆ ಯಾವ ಸರ್ಕಾರವೂ ಮಾಡಿರಲಿಲ್ಲ. ಆದರೆ ಈಗ ಇವರು ಮಾಡಿದ್ದಾರೆ. ೧೯೭೭ರಲ್ಲಿ ನಡೆದ ಚುನಾವಣೆಯಲ್ಲಿ

ಮತ್ತು ೧೯೮೫ರಲ್ಲಿ ನಡೆದ ಚುನಾವಣೆಯಲ್ಲಿ ಇವರು ರೈತರ ಬೆಂಬಲ ಪಡೆದು ಅಧಿಕಾರಕ್ಕೆ ಬಂದೆವು ಎಂದು ಹೇಳಿ ಕೊಂಡ ಮೇಲೆ, ಅವರ ಬಗ್ಗೆ ಸರ್ಕಾರದ ನೀತಿ ಯಾವ ರೀತಿ ಇರಬೇಕೆಂದರೆ, ಅವರ ಜಮೀನನ್ನು ಹಾಗೂ ಅವರ ಆಸ್ತಿಯನ್ನು ಉಳಿಸುವಂತಹ ರೀತಿಯಲ್ಲಿರಬೇಕು, ಆದರೆ ಇವೊತ್ತು ಅವರ ಆಸ್ತಿಯನ್ನು ಹರಾಜು ಹಾಕುವ ನೀತಿಯನ್ನು

ಅನುಸರಿಸುತ್ತಿದ್ದಾರೆ. ರೈತರ ಆಸ್ತಿಯನ್ನು ಹರಾಜು ಹಾಕಲು ಡಿ. ಸಿ. ಅವರೇ ಮುಂದೆ ನಿಂತರೆ ಅದನ್ನು ಕೊಳ್ಳಲು ಖಾಸಗಿಯವರು ಯಾರು ತಾನೇ ಮುಂದೆ ಬರುತ್ತಾರೆ? ಸರ್ಕಾರ ಹತ್ತಾರು ಬಲಬುಜಗಳನ್ನು ಹೊಂದಿರುತ್ತದೆ. ಇಂತಹ ಸರ್ಕಾರದ ವಿರುದ್ಧ ಯಾರು ತಾನೆ ಹರಾಜಿನಲ್ಲಿ ಖಾಸಗಿಯಾಗಿ ಭಾಗವಹಿಸಲು ಮುಂದೆ ಬರುತ್ತಾರೆ ? ಇದರ ಜೊತೆಗೆ ಒಂದು ಇಲಾಖೆ ಯಿಂದ ಮತ್ತೊಂದು ಇಲಾಖೆಗೆ ಹಣಕಾಸನ್ನು ವರ್ಗಾವಣೆ ಮಾಡುವಂತಹ ಅಧಿಕಾರ ಸಹ ಇದೆ. ಈಗಾಗಲೇ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳಿಗೆ, ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಗಳಿಗೆಂದು ಮೀಸಲಿಟ್ಟಿದ್ದ ಹಣವನ್ನು ಬರಗಾಲದ ಕೆಲಸಗಳಿಗೆಂದು ಡೈವರ್ಟ್ ಮಾಡಿದ್ದಾರೆ. ರೈತರ ಬೆನ್ನೆಲುಬುಗಳಂತೆ ಇರುವ ಈ ಸೊಸೈಟಿಗಳ ಹಣವನ್ನು ಬೇರೆ ಕಡೆಗೆ ಡೈವರ್ಟ್ ಮಾಡಿದರೆ, ಈ ಸಂಘಗಳು ಯಾವ ರೀತಿ ಬೆಳೆಯುತ್ತವೆ ? ಈ ಬರಗಾಲದ ಹೆಸರಿನಲ್ಲಿ ಕೆಲವು ಕೋಟಿ ರೂಪಾಯಿಗಳನ್ನು ನಾನಾ ಇಲಾಖೆಗಳಿಂದ ಡೈವರ್ಟ್ ಮಾಡಿದ್ದಾರೆ. ಇದರ ಜೊತೆಗೆ ಬೇರೆ ಬೇರೆ ಇಲಾಖೆಗಳಿಗೆ ಸೇರಿದ ಹಣವನ್ನು ಇವರು ಚೀಲಗಳಲ್ಲಿ ತುಂಬಿಕೊಂಡು ಹೋಗಿ ರೈತರ ಆಸ್ತಿಗಳನ್ನು ಹರಾಜಿನ ಮೂಲಕ ಪಡೆದುಕೊಳ್ಳಲು ಬಳಸಿದರೆ, ಖಾಸಗಿಯವರು ಆ ಬಿಡ್‌ಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆಯೇ ? ಇವೊತ್ತು ರಾಜ್ಯಾದ್ಯಂತ ಭೀಕರ ಬರಗಾಲ ಬಂದಿರುವಾಗ ರೈತರು ಯಾವ ರೀತಿ ಸಾಲ ತೀರಿಸಲು ಸಾಧ್ಯವಾಗುತ್ತದೆ ? ಹೀಗೆ ನಮ್ಮ ರೈತರು ನಾನಾ ರೀತಿಯ ಅನ್ಯಾಯಗಳಿಗೆ ಒಳಗಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಬಂದಿರುವುದರಿಂದ ಕೇಂದ್ರದವರು ಹೆಚ್ಚಿನ ನೆರವನ್ನು ನೀಡಬೇಕೆಂದು ಇವರು ಕೇಳುತ್ತಿದ್ದಾರೆ. ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರ ವಿರುವುದರಿಂದ ನಾವು ಪ್ರಧಾನಮಂತ್ರಿಗಳಿಗೆ ಹೇಳಿ ಹೆಚ್ಚಿನ ನೆರವನ್ನು ಕೊಡಿಸಬೇಕೆಂದು ಈ ಸರ್ಕಾರದವರು ಕೇಳಿಕೊಂಡಿದ್ದಾರೆ. ಈಗಾಗಲೇ ನಾವು ಈ ಬಗ್ಗೆ ಪ್ರಧಾನಮಂತ್ರಿಗಳ ಹತ್ತಿರ ಮಾತ ನಾಡಿದ್ದೇವೆ. ಹೆಚ್ಚಿನ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಈ ವಿಚಾರದಲ್ಲಿ ನಾವು ನಮ್ಮ ಸಲಹೆ ಮತ್ತು ಸಹಕಾರವನ್ನು ನೀಡುತ್ತೇವೆ. ಆದರೆ ಸರ್ಕಾರದವರು ಸಹ ವೈಜ್ಞಾನಿಕ ಆಧಾರದ ಮೇಲೆ ಬರಗಾಲಕ್ಕೆ ಸಂಬಂಧಪಟ್ಟಂತೆ ಕೇಂದ್ರಕ್ಕೆ ವರದಿಗಳನ್ನು ಕಳುಹಿಸಿಕೊಡಬೇಕಾಗುತ್ತದೆ. ಇವರು ಸರಿಯಾದ ವರದಿ ಕೊಟ್ಟರೆ ಅವರು ಎಷ್ಟು ಹಣ ಕೊಡಬೇಕೆಂಬುದನ್ನು ತೀರ್ಮಾನ ಮಾಡುತ್ತಾರೆ. ಇದರಲ್ಲಿ ಕಾನೂನಿನ ಪ್ರಶ್ನೆಯೂ ಅಡಕವಾಗಿದೆ, ನಮ್ಮ ರಾಜ್ಯದ ೮-೯ ಜಿಲ್ಲೆಗಳಲ್ಲಿ ಬರಗಾಲವಿರುವುದರಿಂದ ಕೇಂದ್ರದವರು ಈಗಾಗಲೇ ೫೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಹಿಂದೆ ಇಷ್ಟೊಂದು ಹೆಚ್ಚಿನ ಹಣ ಬರಗಾಲಕ್ಕೆಂದು ಬಿಡುಗಡೆ ಆಗಿರಲಿಲ್ಲ. ಈ ೫೩ ಕೋಟಿ ರೂಪಾಯಿಗಳ ಪೈಕಿ ಈಗಾಗಲೇ ೪೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇನ್ನುಳಿದ ೧೧ ಕೋಟಿ ರೂಪಾಯಿಗಳನ್ನು ಇಷ್ಟರಲ್ಲಿಯೇ ಬಿಡುಗಡೆ ಮಾಡುತ್ತಾರೆ. ಅವರು ಇಲ್ಲಿಯವರೆಗೆ ಕೊಟ್ಟ ೪೨ ಕೋಟಿ ರೂಪಾಯಿಗಳನ್ನು ಈಗಾಗಲೇ ಇವರು ಮುಗಿಸಿದ್ದಾರೆ. ಮತ್ತೆ ಕೇಂದ್ರದ ನೆರವು ಬರುವುದು ತಡವಾದರೆ ನಮ್ಮ ರಾಜ್ಯದ ಬಗ್ಗೆ ಕೇಂದ್ರದವರು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆಂದು ಇವರು ಆಪಾದನೆ ಮಾಡುತ್ತಾರೆ. ಕೇಂದ್ರದವರು ಹಣ ಕೊಟ್ಟಾಗ ಅವರಿಗೆ ಅಭಿನಂದನೆ ಸಲ್ಲಿಸುತ್ತಾರೆ. ಹಣ ಕೊಡುವುದು ತಡವಾದರೆ ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆಂದು ಹೇಳುತ್ತಾರೆ. ಮೊನ್ನೆ ೭ನೇ ತಾರೀಖು ಶ್ರೀ ರಾಜೀವ್‌ಗಾಂಧಿ ಅವರು ಇಲ್ಲಿಗೆ ಭೇಟಿಕೊಟ್ಟಾಗ ಇದೇ ಮಾತನ್ನು ಹೇಳಿದ್ದಾರೆ. ರೈತರ ಬಗ್ಗೆ ಇವರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂಬುದಕ್ಕೆ ಸಹಕಾರಿ ಸಂಘದ ಕಾಯಿದೆಗೆ ಇವರು ತಂದಿರುವ ತಿದ್ದುಪಡಿಯೇ ಸಾಕ್ಷಿ ಆಗಿದೆ. ಇವರು ಅಧಿಕಾರಕ್ಕೆ ಬಂದಾಗ ರೈತರ ಬೆಂಬಲದಿಂದ ಅಧಿಕಾರಕ್ಕೆ ಬಂದೆವು ಎಂದು ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಈಗ ಅವರ ಬೆನ್ನೆಲುಬನ್ನು ಮುರಿಯಲು ಹೊರಟಿದ್ದಾರೆ. ಈ ಹಿಂದೆ ಯಾವ ಪಕ್ಷದ ಸರ್ಕಾರ ಕೂಡ ಇಂತಹ ಕಾನೂನನ್ನು ಜಾರಿಗೆ ತಂದಿರಲಿಲ್ಲ. ಈಗ ಇವರು ತಂದಿರುವಂಥ ಈ ಕಾನೂನಿನಿಂದ

ಕರ್ನಾಟಕ ರಾಜ್ಯದಲ್ಲಿರುವಂತಹ ಲಕ್ಷಾಂತರ ರೈತ ಕುಟುಂಬಗಳ ಮೇಲೆ ಗದಾ ಪ್ರಹಾರದಂತಿದೆಯೆಂದು ಸ್ಪಷ್ಟವಾಗಿ ಹೇಳಬಹುದು. ಒಟ್ಟಿನಲ್ಲಿ ಇವರು ಇವರ ಪಕ್ಷದ ಚುನಾವಣಾ ಪ್ರಣಾಳಿಕೆಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇದೊಂದು ಅಕ್ಷಮ್ಯ ಅಪರಾಧ ಇವರು ಮಾಡಿರುವಂತಹ ಈ ತಪ್ಪನ್ನು ಕರ್ನಾಟಕ ರಾಜ್ಯದಲ್ಲಿರುವಂಥ ಯಾವ ರೈತ ಕುಟುಂಬಗಳೂ ಸಹ ಕ್ಷಮಿಸುವುದಿಲ್ಲ. ಆದ್ದರಿಂದ ಈ ತಪ್ಪನ್ನು ಕೂಡಲೇ ಸರಿಪಡಿಸಬೇಕು. ಒಂದು ಕಡೆ ರೈತರು ಬರಗಾಲದ ಕಾರಣದಿಂದ ಬೆಳೆ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಮತ್ತೊಂದು ಕಡೆ ಕೆಲಸ ಮಾಡಲು ಕೂಲಿ ಕೆಲಸ ಸಿಗದೆ ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಾಲದ ಬಾಕಿ ಕೊಡದಿದ್ದರೆ ಅವರ ಜಮೀನನ್ನು ಹರಾಜು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ರೈತರನ್ನು ಮುಗಿಸಿಬಿಡಲು ಹೊರಟಿದ್ದಾರೆ. ಈ ಮೊದಲು ಅನೇಕ ಗೇಣಿದಾರರು ಪಿ ಎಲ್. ಡಿ. ಬ್ಯಾಂಕ್‌ನಿಂದ ಸಾಲ ಪಡೆದು ಕೆಲವು ಕಂತುಗಳನ್ನು ಕಟ್ಟಿದ್ದರು ಇಂತಹ ಗೇಣಿದಾರರು ಬಾಕಿ ಕೊಡಬೇಕಾದ ಕಂತುಗಳನ್ನು ವಜಾ ಮಾಡುತ್ತೇವೆಂದು ಹೇಳಿದ್ದರು. ಆದರೆ ಈಗ ಬಾಕಿ ಕಂತುಗಳನ್ನು ಕಟ್ಟಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಸೊರಬ, ಶಿವಮೊಗ್ಗ, ಗುಲ್ಬರ್ಗ, ದಕ್ಷಿಣಕನ್ನಡ, ಕಾರವಾರ, ಚಿಕ್ಕಮಗಳೂರು ಹೀಗೆ ನಾನಾ ಜಿಲ್ಲೆಗಳಲ್ಲಿರುವಂತಹ ಸಾವಿರಾರು ಈ ಗೇಣಿದಾರರಿಗೆ ನೋಟೀಸ್ ಕೊಟ್ಟಿದ್ದಾರೆ. ಈ ಬಗ್ಗೆ ನನಗೆ ರಾಶಿರಾಶಿ ಪತ್ರಗಳನ್ನು ಬರೆದಿದ್ದಾರೆ. ಅದನ್ನೆಲ್ಲಾ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ. ಬರಗಾಲದ ಕೂಗು ಎಲ್ಲೆಡೆ ಕೇಳಿ ಬರುತ್ತಿರುವಾಗ ಇವರು ಸಾಲದ ವಸೂಲಿಗೆ ಹೊರಟಿರುವುದು ಸರಿಯೇ ಎಂದು ಕೇಳಬೇಕಾಗುತ್ತದೆ ? ಈ ಬಗ್ಗೆ ಮಾನ್ಯ ಜಾಲಪ್ಪನವರು ಆಡಿರುವಂಥ ಮಾತುಗಳನ್ನು ಸಹ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಅವರ ಮಾತಿನ ಸ್ಪೀಡ್ ಆಗಿದೆ. ಇದು ಬರಗಾಲದ ಸಮಯ ಎಂದು ಅವರಿಗೆ ತಿಳಿದಿರುವುದರಿಂದ ಅವರ ಮಾತಿನ ಸ್ಪೀಡ್ ಕಡಿಮೆ ಆಗಿದೆ. ಬಾಕಿ ಕೊಡಬೇಕಾಗಿರುವುದು ದೊಡ್ಡ ದೊಡ್ಡ ರೈತರೇ ಹೊರತರು ಸಣ್ಣ ರೈತರಲ್ಲ ಎಂದು ಇವರು ಹೇಳಿಕೆ ಕೊಟ್ಟ ಮೇಲೆ ಬಾಕಿ ಕೊಡಬೇಕಾದ ದೊಡ್ಡ ದೊಡ್ಡ ರೈತರು ಎಷ್ಟು ಜನರಿದ್ದಾರೆ, ಮಧ್ಯಮ ವರ್ಗದವರು ಎಷ್ಟಿದ್ದಾರೆ, ಸಣ್ಣ ವರ್ಗದ ಅಂದರೆ ಬಡ ರೈತರು ಎಷ್ಟಿದ್ದಾರೆ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಡಬೇಕೆಂದು ಕೇಳಿದ್ದೇವೆ. ಹಳೆಯ ಬಾಕಿ ಕೊಟ್ಟವರು ಬಡ್ಡಿ ಕೊಡಬೇಕಾಗಿಲ್ಲವೆಂದು ಸರ್ಕಾರದವರು ಹೇಳಿಕೆ ಕೊಟ್ಟಮೇಲೂ ಸಹ ಅನೇಕ ಜನ ರೈತರು ಈ ಸೌಲಭ್ಯವನ್ನು ಬಳಸಿಕೊಳ್ಳಲಿಲ್ಲ. ಇದಕ್ಕೆ ಹಣದ ತೊಂದರೆಯೇ ಕಾರಣ. ಇಂತಹವರ ಪೈಕಿ ಬಡವರು ಮತ್ತು ಮಧ್ಯಮ ವರ್ಗದವರೇ ಜಾಸ್ತಿ ಇದ್ದಾರೆಂದು ನಾವು ತಿಳಿದುಕೊಂಡಿದ್ದೇವೆ ಸಹಕಾರ ಇಲಾಖೆಯ ಬೇಡಿಕೆಗಳು ಈ ಸಭೆಯ ಮುಂದೆ ಬಂದಾಗ ಇದನ್ನೆಲ್ಲಾ ವಿವರವಾಗಿ ಹೇಳೋಣ. ಈಗ ಇಲ್ಲಿರುವ ಪ್ರಶ್ನೆ ಎಂದರೆ, ಯಾವ ರೈತರ ಬೆಂಬಲ ಪಡೆದು ಇವರು ಅಧಿಕಾರಕ್ಕೆ ಬಂದರೋ, ಅವರಿಗೆ ಅನ್ಯಾಯ ಮಾಡಿದ್ದಾರೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಇವರು ಗೇಣಿದಾರರಿಗೆ ಮೋಸ ಮಾಡಿದ್ದಾರೆ ಬಾಕಿ ಇದ್ದ ಕಂತುಗಳನ್ನು ವಜಾ ಮಾಡುತ್ತೇವೆಂದು ಹೇಳಿ ಈಗ ಮತ್ತೆ ನೋಟೀಸ್ ಜಾರಿ ಮಾಡುತ್ತಿದ್ದಾರೆ, ಸಿದ್ದಾಪುರ ತಾಲೂಕ್ ಒಂದರಲ್ಲಿಯೇ ಸಾವಿರಾರು ನೋಟೀಸ್‌ಗಳನ್ನು ಜಾರಿ ಮಾಡಿದ್ದಾರೆ. ಈ ರಾಜ್ಯಪಾಲರ ಭಾಷಣದಲ್ಲಿ ಗೇಣಿದಾರರ ಬಗ್ಗೆ ಒಂದು ಚಕಾರ ಶಬ್ದ ಇಲ್ಲ. ಇದಕ್ಕೆ ಕಾರಣವೆಂದರೆ, ಈ ಜನರ ಬಗ್ಗೆ ಸಾಕಷ್ಟು ಕಳಕಳಿ ಇಲ್ಲದಿರುವುದು. ಈ ಜನರ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದೇವೆಂದು ಹೇಳಿಕೊಂಡ ಮೇಲೆ, ಇವರ ಬಗ್ಗೆ ಸಾಕಷ್ಟು ಕಾಳಜಿ ಇರಬೇಕಾಗಿತ್ತು. ಆದರೆ ಅದು ಇವರಿಗೆ ಇಲ್ಲವಾಗಿದೆ. ರೈತರ ಈಗಿನ ಕಷ್ಟದ ಪರಿಸ್ಥಿತಿಯನ್ನು ನಾನು ಸಾಕಷ್ಟು ವಿಶ್ಲೇಷಣೆ ಮಾಡಿದ್ದೇನೆ. ಇವೊತ್ತಿನ ದಿವಸ ಹರಿಜನ ಮತ್ತು ಗಿರಿಜನರಲ್ಲಿ, ಅಲ್ಪಸಂಖ್ಯಾತರಲ್ಲಿ, ಹಿಂದುಳಿದ ವರ್ಗದವರಲ್ಲಿ ಹೀಗೆ ಎಲ್ಲ ವರ್ಗದ ಜನರಲ್ಲಿಯೂ ಸಹ ಬಡ ಜನರು ಇದ್ದಾರೆ. ಇದನ್ನು ಎಲ್ಲರೂ ಒಪ್ಪಿದ್ದಾರೆ. ಆದ್ದರಿಂದ ಈ ವರ್ಗದ ಜನರಿಗೆ ಪರಿಹಾರ ಒದಗಿಸುವ ಬಗ್ಗೆ ಈ ಸರ್ಕಾರದವರು ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬುದನ್ನು ಸ್ವಲ್ಪ ನೋಡಬೇಕಾಗಿದೆ. ಸರ್ಕಾರ ನಡೆಸುವವರಿಗೆ ಈ ಜನರ ಬಗ್ಗೆ ಸಾಕಷ್ಟು ಚಿಂತನೆ ಇರಬೇಕು. ಈ ಜನರನ್ನು ಮೇಲೆ ತರುವ ದಿಶೆಯಲ್ಲಿ ನಾವು ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಈ ಜನರ ಸಲುವಾಗಿ ಕೆಲವೊಂದು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ಕೊಟ್ಟಾಗ ಮಾತ್ರ ಒಳ್ಳೆಯ ಫಲಿತಾಂಶ ಸಿಕ್ಕಿದೆ ಎಂಬ ಭಾವನೆ ಬರುತ್ತದೆ. ಇಂತಹ ಜನರ ಬಗ್ಗೆ ಆಡಳಿತ ನಡೆಸುವವರಿಗೆ ಕಾಳಜಿ ಇರಬೇಕು. ಈ ಜನರಿಗೆ ಬರಗಾಲದ ಪ್ರದೇಶಗಳಲ್ಲಿ ಕೆಲಸ ಒದಗಿಸುವ ಬಗ್ಗೆ, ಸೈಟ್‌ಗಳನ್ನು ಹಂಚುವ ಬಗ್ಗೆ, ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಸಾಕಷ್ಟು

ನಿಗಾವಹಿಸಬೇಕಾಗುತ್ತದೆ. ಈ ಜನರ ಮೇಲೆ ಪೋಲೀಸರ ದೌರ್ಜನ್ಯ ಏನಾದರೂ ನಡೆದರೆ, ಕೂಡಲೇ ಅವರ ನೆರವಿಗೆ ಹೋಗಿ ಅವರ ನೋವನ್ನು ಹೋಗಲಾಡಿಸಬೇಕಾಗುತ್ತದೆ. ಇಂತಹ ಒಂದು ಸದ್ಭಾವನೆ ಸರ್ಕಾರಕ್ಕೆ ಇರಬೇಕು ಮತ್ತು ಅಧಿಕಾರದಲ್ಲಿರುವಂತಹ ಆಡಳಿತ ಪಕ್ಷದವರಿಗೆ ಇರಬೇಕು. ಈ ಜನರ ಏಳಿಗೆ ಸಲುವಾಗಿ ಸಾಕಷ್ಟು ಕಾಳಜಿವಹಿಸಬೇಕು ಮತ್ತು ಸಾಕಷ್ಟು ಚಿಂತನೆ ಮಾಡಬೇಕು, ಅಷ್ಟೇ ಅಲ್ಲ, ಅದನ್ನು ಕಾರ್ಯರೂಪದಲ್ಲಿ ತರಬೇಕು, ಇಲ್ಲದಿದ್ದರೆ ಇವರು ಈ ಜನರ ಬಗ್ಗೆ ಹೇಳುತ್ತಿದ್ದಾರೆ ಅದು ಬರೀ ಕುತಂತ್ರವಾಗುತ್ತದೆ.

ಒಂದೇ ಮಾತಿನಲ್ಲಿ ಹೇಳುವುದಾದರೆ, ಯಾರ ಬೆಂಬಲವನ್ನು ಪಡೆದು ಇವರು ಅಧಿಕಾರಕ್ಕೆ ಹೋದರೋ ಇವೊತ್ತು ಅದೇ ವರ್ಗದವರ ಮೇಲೆ ಗದಾ ಪ್ರಹಾರವನ್ನು ಕಾನೂನಿನ ಚೌಕಟ್ಟಿನಲ್ಲಿ ಮತ್ತೆ ಬೇರೆ ರೂಪದಲ್ಲೂ ಕಾನೂನು ಬಾಹಿರವಾದ ಕಾರ್ಯಕ್ರಮವನ್ನು ಹಾಕಿದಾಗ ಅದು ಕುತಂತ್ರವಾಗುತ್ತದೆ, ಕಾಳಜಿಗೂ ಕುತಂತ್ರಕ್ಕೂ ಬಹಳ ವ್ಯತ್ಯಾಸ ಇದೆ. ಕಾಳಜಿಗೂ ಕುತಂತ್ರಕ್ಕೂ ಯಾವುದೇ ರೀತಿಯ ಸಂಬಂಧ ಇರಬಾರದು ಯಾವ ವರ್ಗದ ಬಗ್ಗೆ ಕಾಳಜಿ ತಮಗೆ ಇದೆಯೋ ಆ ಕಾಳಜಿಯ ಬಗ್ಗೆ ಕೊನೆಯವರೆಗೂ ನಾನು ಹೆಜ್ಜೆ ಹಾಕಬೇಕಾಗುತ್ತದೆ. ಅದೇ ತಮ್ಮ ಮುಖವಾಡ ಬೇಕಾಗಿ ಇರಬೇಕು. ಅಂದಾಗ ಮಾತ್ರ ಕಾಳಜಿಗೆ ಅರ್ಥ ಬರುತ್ತದೆ. ಇಲ್ಲದಿದ್ದರೆ ಅದು ಕುತಂತ್ರವಾಗಿ ಪರ್ಯಾವಸನವಾಗುತ್ತದೆ. ನನಗೆ ಗೊತ್ತಿರುವ ಮಟ್ಟಿಗೆ ಇವರ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶಗಳನ್ನು ನೋಡಿದರೆ ಸಮುದ್ರದಷ್ಟು ಅಗಲವಾದ ವ್ಯತ್ಯಾಸ ಇದೆ. ಸಮುದ್ರದಷ್ಟು ಅಗಲವಾಗಿರುವಂತಹ ವ್ಯತ್ಯಾಸವನ್ನು ಹೊಂದಿರತಕ್ಕ ಈ ಒಂದು ಸಂದರ್ಭದಲ್ಲಿ ಇದು ಕಾಳಜಿಯಾಗುವುದಕ್ಕೆ ಹೇಗೆ ಸಾಧ್ಯ ? ಇದು ಅಂತಿಮವಾಗಿ ಕುತಂತ್ರವಾಗಿ ಪರ್ಯಾವಸನವಾಗುತ್ತದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಸಮಾಜದಲ್ಲಿ ಇರತಕ್ಕ ದುರ್ಬಲ ವರ್ಗದವರ ಬಗ್ಗೆ ಇವರು ವಹಿಸಿರುವ ಕಾಳಜಿಯ ಬಗ್ಗೆ ಈ ಸಂದರ್ಭದಲ್ಲಿ ಹೇಳುವುದಿಲ್ಲ. ಅದನ್ನು ಪೊಲೀಸ್ ಇಲಾಖೆಯ ಬಗ್ಗೆ ಚರ್ಚೆ ಬಂದಂತಹ ಸಂದರ್ಭದಲ್ಲಿ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ದೊಡ್ಡ ಪಟ್ಟಿಯೇ ಇದೆ. ಅದನ್ನು ನಾನು ನಾನು ಈಗಾಗಲೇ ಸರ್ಕಾರಕ್ಕೂ ಕಳುಹಿಸಿಕೊಟ್ಟಿದ್ದೇನೆ. ಕೊಲೆಗಳು, ದರೋಡೆಗಳು ಅವ್ಯಾಹತವಾಗಿ ನಡೆಯುತ್ತಿದೆ. ಕಾನೂನು ಪಾಲನೆ ಸಂಪೂರ್ಣವಾಗಿ ನಿಷ್ಕ್ರಿಯತೆಯಿಂದ ಕೂಡಿದೆ. ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಸಮಾಜದಲ್ಲಿರತಕ್ಕ ಜನ ಸಾಮಾನ್ಯರು ಹಾಗೂ ದುರ್ಬಲ ವರ್ಗದವರಲ್ಲಿ ಅದರಲ್ಲೂ ಪಾಪದ ಜನಗಳು ಯಾರು ಇದ್ದಾರೆ ಅವರಿಗೆ ರಕ್ಷಣೆಯನ್ನು ಕೊಡುವುದಕ್ಕೆ ನಿಮ್ಮ ಕೈಯ್ಯಲ್ಲಿ ಆಗಿಲ್ಲ. ಮಹತ್ತರವಾದ ಘಟನೆಗಳೇ ನಡೆದಿವೆ. ನಿರ್ಭೀತಿಯಿಂದ ನಡೆಯುತ್ತಿವೆ. ಒಂದೊಂದು ಘಟನೆಯನ್ನು ನೋಡಿದಾಗಲೂ ಅದರ ವಿಚಾರವನ್ನು ನೋಡುವುದಾದರೆ, ಅದಕ್ಕೂ ಮಾರ್ಜಿನ್ ಉಂಟು, ಆದರೆ. ಈ ಹಿಂದೆ ನಡೆದಂತಹ ಕೊಲೆ ದರೋಡೆಗಳನ್ನು ನೆನಪಿಗೆ ತಂದುಕೊಳ್ಳುವುದಾದರೆ, ಅವ್ಯಾಹತವಾಗಿ ನಡೆಯುತ್ತಿದ್ದು, ಜನ ಸಾಮಾನ್ಯರು ತಮ್ಮ ಜನ ಜೀವನದಲ್ಲಿ ನಿದ್ರೆಯಿಂದ ಎಚ್ಚೆತ್ತ ಕೂಡಲೇ ದರೋಡೆ ಕೊಲೆಗಳೇ ಅವರ ಕಣ್ಣೆದುರಿಗೆ ಬರುತ್ತವೆ. ಅವರಿಗೆ ನಿದ್ರೆಯೇ ಬಾರದೇ ಇರತಕ್ಕ ಪರಿಸ್ಥಿತಿ ನಿರ್ಮಾಣವಾಗಿರತಕ್ಕ ಸಂದರ್ಭದಲ್ಲಿ ಸಮಾಜಗತರತಕ್ಕ ದುರ್ಬಲವರ್ಗದವರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲದೇ ಇರತಕ್ಕ ವಿಚಾರ. ಜನ ಸಾಮಾನ್ಯರ ಭದ್ರತೆಯ ಬಗ್ಗೆ ಯಾವಾಗ ಕಾಳಜಿ ಇಲ್ಲವೋ, ಅದರ ಒಂದು ಫಲಿತಾಂಶದಿಂದ ಇವತ್ತು ಕೊಲೆಗಳು, ಸುಲಿಗೆಗಳು, ದರೋಡೆಗಳು ಹೆಣ್ಣುಮಕ್ಕಳ ಮಂಗಳ ಸೂತ್ರವನ್ನು ಅಪಹರಿಸಿರತಕ್ಕ ಪ್ರಸಂಗಗಳು ನಡೆಯುತ್ತಿವೆ. ಹಿಂದೆಯೂ ಕೂಡ ಈ ರೀತಿಯ ಪ್ರಕರಣಗಳು ನಡೆದಿವೆ. ನಡೆದಿಲ್ಲವೆಂದು ಹೇಳುವುದಿಲ್ಲ. ಆದರೆ ಅದರ ಪ್ರಮಾಣ ಎಷ್ಟು ? ದಿನೇ ದಿನೇ ಅದು ಕಡಿಮೆಯಾಗುತ್ತಾ ಹೋಗಬೇಕು. ಅದರ ಬದಲು ಅವ್ಯಾಹತವಾಗಿ ಅದರ ಪ್ರಮಾಣ ಏರಿಕೆಯಾಗುತ್ತಾ ಹೋಗುತ್ತಿದೆ. ಇದನ್ನು ಯಾರಾದರೂ ಕೂಡ ವಿಚಾರ ಮಾಡತಕ್ಕದ್ದಾಗಿದೆ. ನಿಮ್ಮ ಆಡಳಿತ ಕಾಲದಲ್ಲಿ ಶಾಸಕರನ್ನೂ ಕೂಡ ಬಿಟ್ಟಿಲ್ಲ. ಚಿಕ್ಕಮಗಳೂರಿನಲ್ಲಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಈ ಸಭೆಯ ಸದಸ್ಯರಾಗಿದ್ದಾಗಲೇ ಅವರ ಮೇಲೆ ಹಲ್ಲೆ ನಡೆದಾಗ ಅ ಬಗ್ಗೆ ಕೇಸನ್ನೇ ಹಾಕಲಿಲ್ಲ. ನಿಮ್ಮ ಪಕ್ಷದವರು ಎಂಬ ಕಾರಣದಿಂದ ಅವರ ಮೇಲೆ ಕೇಸನ್ನು ಹಾಕಲಿಲ್ಲ ಅವರಿಂದ ನಿಮಗೆ ಬೆಂಬಲ ದೊರೆಯಬೇಕೆಂಬ ದೃಷ್ಟಿಯಿಂದ ಕೇಸನ್ನೂ ಹಾಕಲಿಲ್ಲ. ಕೇಸನ್ನು ರಿಜಿಸ್ಟರ್ ಕೂಡ ಮಾಡಲಿಲ್ಲ. ಮೌಲ್ಯಧಾರಿತ ರಾಜಕಾರಣದ ಬಗ್ಗೆ ಚಿಂತನೆ ಮಾಡತಕ್ಕವರು ಇಂತಹ ಘಟನೆಗಳಿಂದ ಮೌಲ್ಯಕ್ಕೆ ಧಕ್ಕೆ ಬರುವುದಿಲ್ಲವೇ ? ತಿಳುವಳಿಕೆಯ ಚೌಕಟ್ಟಿನಲ್ಲಿ

ಇದು ಬರುವುದಿಲ್ಲವೇ ? ಸುಳ್ಯದ ಶಾಸಕರಾದ ಶ್ರೀಮಾನ್ ಕುಶಾಲರವರ ಮೇಲೆ ಆಗಿರತಕ್ಕ ಅನ್ಯಾಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಈಗ ಹೋಗುವುದಿಲ್ಲ. ಅದೇ ರೀತಿ ಹರಪನಹಳ್ಳಿಯ ಶಾಸಕರಾದ ಶ್ರೀಮಾನ್ ಯಂಕಾನಾಯಕ್‌ರವರ ಮೇಲೆ ಆಗಿರತಕ್ಕ ಅನ್ಯಾಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಪೊಲೀಸ್ ಇಲಾಖೆಯಲ್ಲಿ ಒಳ್ಳೆಯ ಜನರೂ ಇದ್ದಾರೆ, ಮತ್ತೆ ಕೆಟ್ಟವರೂ ಇದ್ದಾರೆ. ಹುತ್ತದಲ್ಲಿರಕ್ಕ ಹಾವು ಬೇರೆಯವರನ್ನು ಕಚ್ಚುತ್ತದೆ, ಸಾಕಿದವರನ್ನೂ ಕೂಡ ಕಚ್ಚುತ್ತದೆ. ಆ ಬಗ್ಗೆ ನಾವು ಬಹಳ ಎಚ್ಚರವನ್ನು ವಹಿಸಬೇಕಾಗುತ್ತದೆ. ಏಕೆಂದರೆ ಯಾವುದೇ ಒಂದು ಪಕ್ಷವಾದರೂ ಕೂಡ ಅಧಿಕಾರದಲ್ಲಿ ಗೂಟ ಹೊಡೆದುಕೊಂಡು ಕೂರುವುದಕ್ಕಾಗುವುದಿಲ್ಲ. ಇದು ಪ್ರಜಾಪ್ರಭುತ್ವ. ಜನತೆ ತೀರ್ಮಾನ ಮಾಡಬೇಕಾಗುತ್ತದೆ. ಅದನ್ನು ನಾವೂ ಕೂಡ ಅರಿಯಬೇಕಾಗುತ್ತದೆ. ಮೌಲ್ಯಾಧಾರಿತದ ಬಗ್ಗೆ ಮಾತನಾಡತಕ್ಕವರು ಇವತ್ತು ಶಾಸನ ಸಭೆಯಲ್ಲಿರತಕ್ಕ ಸದಸ್ಯರುಗಳನ್ನೇ ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಭಾವನೆಗೆ ಹೋದರೆ, ಜನಸಾಮಾನ್ಯರಲ್ಲಿ ಪಾಪದ ಜನಗಳು ಯಾರಿದ್ದಾರೆ, ಅವರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಸಮಾಜದಲ್ಲಿರತಕ್ಕ ಹರಿಜನ–ಗಿರಿಜನರು, ದುರ್ಬಲವರ್ಗದವರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಲಿಂಗಾಯಂತ ವರ್ಗದವರು, ಬ್ರಾಹ್ಮಣ ವರ್ಗದವರು, ಯಾರೇ ಆಗಲಿ, ಎಲ್ಲರೂ ಬಿ.ಎ., ಎಲ್.ಎಲ್.ಬಿ. ಓದಿ ವಕೀಲಿಯನ್ನು ಮಾಡುವುದಕ್ಕಾಗುವುದಿಲ್ಲ. ಅದೇ ರೀತಿ ಎಲ್ಲರೂ ಎಂ.ಬಿ.ಬಿ.ಎಸ್. ಓದಿ ಡಾಕ್ಟರ್ಸ್ ಆಗುವುದಕ್ಕಾಗುವುದಿಲ್ಲ. ಕಾನೂನನ್ನು ಎಲ್ಲರೂ ತಿಳಿದುಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ಶೇಕಡ ೭೦ರಷ್ಟು ಇಂದು ಕೂಡ ಹೆಬ್ಬೆಟ್ಟು ಹೊತ್ತತಕ್ಕಂಥ ನಮ್ಮ ಸಮಾಜದಲ್ಲಿ ಕೈಲಾಗದಂತಹ ವರ್ಗದ ಏಳಿಗೆಯ ಬಗ್ಗೆ ಬಾಯಿಯಿಲ್ಲದ ಜನಗಳ ಪರವಾಗಿ ಕೆಲಸ ಮಾಡಬೇಕಾಗುತ್ತದೆ. ಕಾಳಜಿಗೆ ದೂರವಾಗಿರತಕ್ಕಂತಹ ನಿಮ್ಮ ಸರ್ಕಾರ ಸಂಬಂಧಪಟ್ಟ ಜನಗಳ ಬೆಂಬಲವನ್ನು ನಿಮ್ಮಿಂದ ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಮಂತ್ರಿಮಂಡಲದಲ್ಲಿರತಕ್ಕ ಮಾನ್ಯ ಮಂತ್ರಿಯವರು ಯಾರ್ಯಾರು ಇದ್ದಾರೆ, ಯಾರ್ಯಾರು ಇದ್ದಾರೆ, ಯಾರ್ಯಾರಲ್ಲಿ ಏನೇನು ಕಾಳಜಿ ಇದೆ ಎಂಬುದನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ಕಲವರ ಹೆಸರನ್ನೂ ಕೂಡ ಹೇಳಬಹುದು. ಅಂತಹವರ ಹೆಸರನ್ನು ಹೇಳುವುದು ಬೇಕಾಗಿಲ್ಲ. ಜನರಲ್ಲಾಗಿ ಹೇಳೋಣ, ಸುಮಾರು ಅವರು ಏನು ತೀದುಕೊಂಡಿದ್ದಾರೆಂದರೆ, ಜನತಾ ಪಕ್ಷ ಕೇವಲ ಕೆಲವರ ಬೆಂಬಲವನ್ನು ಪಡೆದಿರತಕ್ಕ ಜನರಿಗೋಸ್ಕರ ಜನತಾಪಕ್ಷ ಇದೆ ಎನ್ನುವ ಭಾವನೆ ಅನೇಕ ಕಡೆಗಳಲ್ಲಿ ವ್ಯಕ್ತವಾಗಿದೆ. ಆ ಬಗ್ಗೆ ನನಗೆ ಬಂದಂತಹ ದೂರನ್ನು ಕೂಡ ಸರ್ಕಾರಕ್ಕೆ ನಾನು ಈಗಾಗಲೇ ಕಳುಹಿಸಿಕೊಟ್ಟಿದ್ದೇನೆ. ಅದರ ಬಗ್ಗೆ ವಿಚಾರಣೆ ಮಾಡುತ್ತಾರೆಂದು ನಾನು ತಿಳಿದಿದ್ದೆ. ಆ ಬಗ್ಗೆ ಏನು ವಿಚಾರಣೆಯನ್ನು ಮಾಡಿದರೋ ತಿಳಿಯದಾಗಿದೆ. ಯಾರು ಏನೇ ಹೇಳಲಿ, ಪಕ್ಷದ ಆಧಾರವೇ ತೀರ್ಮಾನವೇ ? ಆ ರೀತಿ ಇದ್ದರೆ ಕಾನೂನು ಏನು ಹೇಳುತ್ತದೆ ? ಬರೀ ಜನತಾ ಪಕ್ಷಕ್ಕೇ ಬೆಂಬಲ ಕೊಡಬೇಕೆಂದು ಎಲ್ಲಿದೆ ? ಅವರು ಯಾವುದೇ ಪಕ್ಷಕ್ಕೆ ಬೆಂಬಲ ಕೊಟ್ಟಿರತಕ್ಕ ಜನರಾಗಿರಬಹುದು. ಅನ್ಯಾಯಕ್ಕೆ ಒಳಗಾಗಿರತಕ್ಕ ವರ್ಗಕ್ಕೆ ಅವರು ಯಾವುದೇ ಪಕ್ಷದ ಬೆಂಬಲಿಗರಾಗಿರಬಹುದು ಅವರು ಕಾಂಗ್ರೆಸ್ ಪಕ್ಷದ ಬೆಂಬಲಿಗರಾಗಿರಬಹುದು, ಸಿ.ಪಿ.ಐ. ಪಕ್ಷದ ಬೆಂಬಲಿಗರಾಗಿರಬಹುದು, ಸಿ.ಪಿ.ಎಂ. ಪಕ್ಷದ ಬೆಂಬಲಿಗರಾಗಿರಬಹುದು, ಬಿ.ಜೆ.ಪಿ.ಯ ಬೆಂಬಲಿಗರಾಗಿರಬಹುದು, ಅಂತಹ ಒಂದು ವರ್ಗಕ್ಕೆ ಬೆಂಬಲವನ್ನು ಕೊಡತಕ್ಕ ವಿಚಾರಧಾರೆಯನ್ನು ಪಕ್ಷರಹಿತವಾಗಿ ವಿಚಾರ ಮಾಡಬೇಕು, ಇಲ್ಲದಿದ್ದರೆ ಇದು ರಾಜಕಾರಣವಾಗುವುದಿಲ್ಲ. ಮೌಲ್ಯ ಏನಿದೆ, ಅದರ ಹೆಜ್ಜೆ, ತಾಳ, ಲಯ ತಪ್ಪಿದೆ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದರಲ್ಲಿ ಅನುಮಾನ ಬೇಕಾಗಿಲ್ಲ ಎಂಬ ವಿಚಾರವನ್ನು ಸ್ಪಷ್ಟಪಡಿಸುತ್ತಿದ್ದೇನೆ. ನಿಮ್ಮ ಜಿಲ್ಲಾ ಮಂತ್ರಿಗಳು ಯಾರ್ಯಾರು ಇದ್ದಾರೆ, ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ನಡೆದಿರತಕ್ಕ ಕೊಲೆ, ಸುಲಿಗೆಗಳನು ಯಾರ್ಯಾರು ಮಾಡಿದ್ದಾರೆಂದು ಗೊತ್ತಾಗಿದ್ದರೂ ಯಾವ ಕ್ರಮವನ್ನು ಅವರ ಮೇಲೆ ಕೈಗೊಂಡಿದ್ದೀರಿ ? ಗೃಹ ಸಚಿವರಾದ ಶ್ರೀಮಾನ್ ರಾಚಯ್ಯನವರು, ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಮಂಡಲದಲ್ಲಿರತಕ್ಕ ಎಲ್ಲ ಸದಸ್ಯರು ಈ ವಿಚಾರವನ್ನು ಚರ್ಚೆಗೆ ಒಳಪಡಿಸಿದ್ದರೂ, ಸಮಾಜದಲ್ಲಿ ಇದು ಒಂದು ಅವ್ಯಾಹತವಾಗಿ ನಡೆಯುತ್ತಿದೆ. ಕಾನೂನು ಪಾಲನೆಯಲ್ಲಿ ವಿಫಲರಾಗಿರುವುದರಿಂದ ಶಾಂತಿಗೆ ಧಕ್ಕೆ ಬರುತ್ತದೆ. ಜನರ ಪ್ರಾಣ ಮತ್ತು ಅವರ ಆಸ್ತಿಗೆ ಧಕ್ಕೆ ಬಂದಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆ ದೃಷ್ಟಿಯಿಂದಲೇ ಇದನ್ನು ವಿಚಾರಣೆ ಮಾಡಲಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ. ಇದರಿಂದಾಗಿ ಈ ಒಂದು ಅನ್ಯಾಯದ ಪರಮಾವಧಿ ಹೆಚ್ಚಿ ಅದನ್ನು ಹತ್ತಿಕ್ಕುವುದಕ್ಕೆ

ಸಾಧ್ಯವಾಗುವುದಿಲ್ಲವೆಂದು ಕೂಡ ಹೇಳುತ್ತೇನೆ. ಕಳೆದ ಅಧಿವೇಶನದ ಸಮಯದಲ್ಲಿ ಆ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನೇ ಮಾಡಿ ಗೃಹ ಸಚಿವರಿಗೆ ಕಳುಹಿಸಿಕೊಟ್ಟಿದ್ದೆವು. ಇವೊತ್ತಿಗೂ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದಾರೆಂಬುದು ಗೊತ್ತಾಗಿಲ್ಲ. ಮತ್ತೆ ಅದೇ ರೀತಿಯ ದೊಡ್ಡ ಪಟ್ಟಿಯನ್ನು ಸಿದ್ಧ ಮಾಡಿದ್ದೇವೆ. ಕಳೆದ ಅಧಿವೇಶನ ಮುಗಿದಮೇಲೆ ಈ ರೀತಿಯ ಪ್ರಕರಣಗಳು ಸಾಕಷ್ಟು ನಡೆದಿವೆ. ನಮ್ಮ ಪಕ್ಷದ ಕಾರ್ಯಕರ್ತರಾದ ಶ್ರೀ ಅಟ್ಟೂರ್ ಅವರ ಕೊಲೆಯಾಯಿತು. ರಾಜ್ಯದ ಹಲವಾರು ಕಡೆ ಜನರ ಸುಲಿಗೆ, ದರೋಡೆಗಳು ಅವ್ಯಾಹತವಾಗಿ ನಡೆದಾಗ ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡತಕ್ಕವರು, ಹಾಗೂ ಮೌಲ್ಯಾಧಾರಿತ ರಾಜಕಾರಣವನ್ನು ಸ್ವಲ್ಪ ಕಡಿಮೆ ಮಾಡಿರುವ ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗಿನಿಂದಲೂ ಈ ಸದನದಲ್ಲಿಲ್ಲ. ವಿಧಾನ ಪರಿಷತ್ತಿಗೆ ಹೋಗಿದ್ದಾರೆಂದು ಹೇಳಿದ್ದರು. ಅವರು ಬೆಳಿಗ್ಗಿನಿಂದಲೂ ಅಲ್ಲೇ ಇದ್ದಾರೋ ಹೇಗೆ ? ಅಥವಾ ಈ ಸದನದ ಕಾರ್ಯಕಲಾಪಕ್ಕಿಂತಲೂ ಪ್ರಮುಖವಾದ ಕಾರ್ಯಕ್ರಮಕ್ಕೆ ಅವರು ಹೋಗಿದ್ದರೆ ಅದಕ್ಕೂ ಒಪ್ಪಿಕೊಳ್ಳೋಣ, ನಾವು ಅಂತಹ ಕಾರ್ಯಕ್ರಮಕ್ಕೆ ಹಾಜರಾಗುವುದು ಬೇಡವೆಂದು ಹೇಳುವುದಿಲ್ಲ. ಸದನದ ಕಾರ್ಯಕಲಾಪಕ್ಕಿಂತಲೂ ದೊಡ್ಡದಾದುದಿಲ್ಲವೆಂದರೆ, ಅದು ಪುನಃ ಅಕ್ಷಮ್ಯ ಅಪರಾಧವಾಗುತ್ತದೆ. ಮೌಲ್ಯಧಾರಿತ ರಾಜಕಾರಣದ ಬಗ್ಗೆ ವ್ಯಾಖ್ಯಾನ ಮಾಡತಕ್ಕಂತಹವರು ಮೊದಲು ಜನರನ್ನು ಪ್ರತಿನಿಧಿಸತಕ್ಕ ಸದಸ್ಯರಿರುವ ಈ ಸಭೆಯಲ್ಲಿ ಕುಳಿತುಕೊಳ್ಳುವ ವಿಚಾರದ ಬಗ್ಗೆ ಗಮನ ಹರಿಸಬೇಕಾಗಿದೆ. ಈ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿರತಕ್ಕ ಮಾನ್ಯ ಮಂತ್ರಿಗಳು ಯಾರ್ಯಾರು ಇದ್ದಾರೆ. ಅವರು ಸರ್ಕಾರವನ್ನು ನಡೆಸುತ್ತಿರತಕ್ಕ ಕಾರ್ಯ ವೈಖರಿಯನ್ನು ನೋಡಿದರೆ ಅದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನರ ಹತ್ತಿರ ನೀವು ಎಷ್ಟು ಸಾರಿ ಹೋಗಿದ್ದೀರೆಂದು ಕೇಳುತ್ತಿದ್ದೇನೆ. ಬಡವರಿಗೆ ಕೊಡತಕ್ಕಂತಹ ನಿವೇಶನ ಏನಿದೆ. ಶಾಸಕನಾಗಿ ನಾನು ಕೊಟ್ಟಿದ್ದೇನೆ. ಬಡವರಿಗೆ ೨೦ ಅಡಿ ೩೦ ಅಡಿ ನಿವೇಶನ ಕೊಡತಕ್ಕದ್ದು ಒಂದು ಕಾರ್ಯಕ್ರಮ ಇದೆ.

ಗ್ರಾಮಾಂತರ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ, ಮತ್ತು ಪಟ್ಟಣ ಪ್ರದೇಶಗಳಲ್ಲಿ, ಬಡಜನರಿಗೆ ಸೈಟ್‌ಗಳನ್ನು ಕೊಡತಕ್ಕ ಕಾರ್ಯಕ್ರಮ ನಿಮ್ಮಲ್ಲಿ ಎಲ್ಲಿದೆ? ೧೯೮೩ ರಿಂದ ೧೯೮೬ ರವರೆಗೂ ನೋಡಿದರೂ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಂತೂ ವಸತಿ ಹೀನ ಬಡಜನರಿಗೆ ಸೈಟ್‌ಗಳನ್ನು ಕೊಡತಕ್ಕ ಕಾರ್ಯಕ್ರಮವನ್ನು ನೀವುಗಳು ಸಂಪೂರ್ಣವಾಗಿ ಸಮಾಧಿ ಮಾಡಿದ್ದೀರಿ. ಸಮಾಜದಲ್ಲಿರತಕ್ಕಂತಹ ಬಡಜನರ ಬಗ್ಗೆ ಅಪಾರ ಕಾಳಜಿ ಇರತಕ್ಕಂತಹ ನೀವು ಅವರ ಬಗ್ಗೆ ನಿವೇಶನಗಳಿಗಾಗಿ ಐದು ರೂಪಾಯಿಗಳನ್ನೂ ಕೂಡಾ ಇದುವರೆಗೂ ಕೊಟ್ಟಿಲ್ಲ. ಈ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಕಾಣಿಸಿಲ್ಲ. ಜನ ಸಾಮಾನ್ಯರ ಉದ್ಧಾರದ ಬಗ್ಗೆ ಬೇಕಾದಷ್ಟು ಹೇಳಿಕೊಂಡಿರುವ ನೀವು ಅವರಿಂದ ಬೆಂಬಲವನ್ನು ಪಡೆದುಕೊಂಡಿದ್ದೀರಿ. ಆದರೆ ಆ ಜನರ ಬಗ್ಗೆ, ಅವರ ನೋವಿನ ಬಗ್ಗೆ ನಿಮಗೆ ಅರಿವು ಇದೆಯೋ ಎಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ಹಾಗೆಯೇ ರೈತರುಗಳ ಬೆಂಬಲವನ್ನೂ ಕೂಡಾ ಪಡೆದುಕೊಂಡಿದ್ದೀರಿ. ಸಹಕಾರ ಸಂಘಗಳಿಂದ ಪಡೆದ ಸಾಲದ ಹಣದ ವಸೂಲಾತಿ ವಿಚಾರದಲ್ಲಿ ರೈತರ ಹಿತಾಸಕ್ತಿಗೆ ಮಾರಕವಾಗುವಂತಹ ರೀತಿಯಲ್ಲಿ ಸಹಕಾರಿ ಕಾಯ್ದೆಗೆ ತಿದ್ದುಪಡಿ ತಂದು ಅವರಿಗೆ ಭಾರಿ ಅನ್ಯಾಯ ಮಾಡಿದ್ದೀರಿ. ಅವರಿಗೆ ಮಾರಕವಾಗುವಂತಹ ಸೆಕ್ಷನ್ ೧೧೧ನ್ನು ತೆಗೆದುಕೊಳ್ಳದಿದ್ದರೆ ಪರಿಸ್ಥಿತಿಯು ವಿಕೋಪಕ್ಕೆ ಹೋಗುತ್ತದೆ. ಅದು ಎಂದಿದ್ದರೂ ಕೂಡಾ ರೈತರುಗಳಿಗೆ ಅಪಾಯಕಾರಿಯಾಗಿದೆ. ಅದರಲ್ಲಿಯೂ ಕ್ಲಾಸ್ 'ಸೀ' ಯನ್ನು ತೆಗೆಯಲೇ ಬೇಕು. ರೈತರ ಹಿತರಕ್ಷಣೆಯನ್ನು ಕಾಯುವ ಆಶ್ವಾಸನೆಯನ್ನು ಕೊಟ್ಟು ಅಧಿಕಾರಕ್ಕೆ ಬಂದಿರುವ ನೀವು ಅವರಿಗೆ ಮಾರಕಪ್ರಾಯವಾದಂತಹ ಇಂತಹ ಕಾನೂನನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳಲಿಚ್ಛಿಸುತ್ತೇನೆ.

ಇನ್ನು ಕನ್ನಡದ ವಿಚಾರವಾಗಿ ಹೇಳುವುದಾದರೆ, ಕನ್ನಡ ನಾಡಿನಲ್ಲಿ ಕನ್ನಡವು ಸಮೃದ್ಧವಾಗಿ ಬೆಳೆಯಬೇಕು, ಕನ್ನಡವು ಸಾರ್ವಭೌಮತ್ವವನ್ನು ಹೊಂದಿ. ರಾರಾಜಿಸುತ್ತಿರಬೇಕು, ಕನ್ನಡವು ಎಲ್ಲೆಲ್ಲೂ ಮೊಳಗಬೇಕು ಎಂಬುದರಲ್ಲಿ ನಮ್ಮ ವಿಚಾರವು ಬೇರೆ ಆಗಿಲ್ಲ. ಕನ್ನಡಕ್ಕೆ ಉತ್ತೇಜನ ಕೊಡಬೇಕೆನ್ನುವುದು ಸರಿಯಾದುದು. ಅದರಂತೆ ನೀವು ಚುನಾವಣೆಯಲ್ಲಿ ಕನ್ನಡ–ಕನ್ನಡ ಎಂದು ಜನರಲ್ಲಿ ಹೇಳಿಕೊಂಡು ಅವರಿಂದಲೂ ಬೆಂಬಲವನ್ನು ಪಡೆದಿರುತ್ತೀರಿ. ಕನ್ನಡ ಚಳುವಳಿಗಾರರು ಕೂಡಾ ತಮ್ಮನ್ನು ಬೆಂಬಲಿಸಿ ತಮ್ಮ ಕಾರ್ಯವನ್ನು ಮೆಚ್ಚಿದ್ದರು. ಕರ್ನಾಟಕ ರಾಜ್ಯದಲ್ಲಿ ಕನ್ನಡವನ್ನು ಅಡಿಯಿಂದ ಮುಡಿಯವರೆಗೆ, ಆಪಾದಮಸ್ತಕವಾಗಿ, ಎಲ್ಲಾ ಹಂತಗಳಲ್ಲಿಯೂ ಜಾರಿಗೆ ಕೊಡುತ್ತೇವೆ

ಎಂದು ಜನರಿಗೆ ಮಾತನ್ನು ಕೊಟ್ಟಿದ್ದೀರಿ. ಇದರ ಅಂಗವಾಗಿ ವಿಶ್ವಕನ್ನಡ ಸಮ್ಮೇಳನವನ್ನು ಮಾಡಿರ ತಕ್ಕಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದು ಏನೆಂದರೆ, ''ಚೆಲುವ ಕನ್ನಡ ನಾಡು'' ಎಂಬ ಒಂದು ಪುಸ್ತಕವನ್ನು ಪ್ರಕಟಿಸಲಾಗಿದೆ. ಅದು ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗಿದೆ. ಇದರ ಲೇಖಕರು ಎಂ.ವಿ. ಕಾಮತ್ ಎನ್ನುವವರು, ಅವರು ಎಡಿಟಿಂಗ್ ಮಾಡಿದ್ದಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಹಾಗೆಯೇ ಇದರ ಪ್ರಕಾಶಕರು '·ವಿಕಾಸ್ ಪಬ್ಲಿಷಿಂಗ್ ಹೌಸ್, ಡೆಲ್ಲಿ''. ಎಂದು ಇದೆ. ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪುಸ್ತಕಗಳ ಪ್ರಕಟಣೆಗಾಗಿ ಸುಮಾರು ೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಮೈಸೂರಿನಲ್ಲಿ ಇರತಕ್ಕಂತಹ ಕಟ್ಟಡಕ್ಕೂ ಕೂಡಾ ಸಾಕಷ್ಟು ಖರ್ಚು ಮಾಡಿದ್ದಿರಿ. ಕಟ್ಟಡದ ವಿಚಾರದಲ್ಲಿ ಅದು ಅರ್ಧಂಬರ್ಧ ಆಗಿರತಕ್ಕಂತಹ ಕಟ್ಟಡ, ಅದನ್ನು ಪೂರ್ಣವಾಗಿ ಮಾಡಿಬಿಡಿ ಎಂದು ನಾನೂ ಕೂಡಾ ಹೇಳಿದ್ದೇನೆ. ಆದರೆ ಸಂಗೀತ, ನಾಟಕ, ನೃತ್ಯ ಇತ್ಯಾದಿಗಳಿಗೆ ಯಥೇಚ್ಛವಾಗಿ ಖರ್ಚು ಮಾಡಿದ್ದೀರಿ. ನಾನು ಕೇಳುವುದೇನೆಂದರೆ ಇದೆಲ್ಲಾ ನಮಗೆ ಈ ಪರಿಸ್ಥಿತಿಯಲ್ಲಿ ಅರ್ಜೆಂಟಾಗಿ ಬೇಕಾಗಿತ್ತೇ ಎಂಬುದು. ಇದಕ್ಕಾಗಿ ಇಷ್ಟೆಲ್ಲಾ ಖರ್ಚು ಮಾಡಿರುವುದು ಈ ನಮ್ಮ ಬರಗಾಲದ ಪರಿಸ್ಥಿತಿಯಲ್ಲಿ ಸಮರ್ಪಕವಾಗಿದೆಯೇ ಎಂಬುದನ್ನು ಕೂಡಾ ವಿಚಾರ ಮಾಡಬೇಕಾಗುತ್ತದೆ. ಇವೆಲ್ಲದಕ್ಕೂ ೩-೪ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿರಬಹುದು. ಅನಾವಶ್ಯಕವಾಗಿ ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವ ಬದಲು ಅದೇ ಹಣವನ್ನು ಅತ್ಯವಶ್ಯಕವಾಗಿ ಬರಗಾಲ ಪ್ರದೇಶಗಳ ಜನಗಳಿಗೆ ಕೊಟ್ಟಿದ್ದರೆ, ಅಂದರೆ ಅವರು ಕೂಲಿ ನಾಲಿ ಮಾಡಿಕೊಂಡು ಕೇಳುವ ೭-೮ ರೂಪಾಯಿಗಳನ್ನು ಕೊಟ್ಟಿದ್ದರೆ ಅವರು ತಮ್ಮ ಹೊಟ್ಟೆಪಾಡಿಗಾಗಿ ತಮ್ಮ ಊರನ್ನು ಬಿಟ್ಟು ಅಲೆದಾಡುವ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಅಂತಹ ಪ್ರದೇಶಗಳ ಜನರು ಸರಕಾರದಿಂದ ಸಾವಿರಗಟ್ಟಲೆ ಹಣವನ್ನು ಕೊಡಿ ಎಂದು ಕೇಳಲಿಲ್ಲ. ಹೊಟ್ಟೆಗಾಗಿ ಕೂಲಿಯನ್ನು ದೊರಕಿಸಿಕೊಡಿ ಎಂದು ಕೇಳಿದರೆ ಅದನ್ನು ಸಮರ್ಪಕವಾಗಿ ಕೊಡುವ ಬದಲು, ಸಂಗೀತ, ನೃತ್ಯ ಕಾರ್ಯಕ್ರಮಗಳಿಗೆ ಅಪಾರ ವೆಚ್ಚವನ್ನು ಮಾಡಿದ್ದೀರಿ. ಇಂದು ಬಂದಿರತಕ್ಕಂತಹ ಬರಗಾಲದ ಪರಿಸ್ಥಿತಿಯ ಹಿನ್ನಲೆಯಲ್ಲಿ ನಾವು ಏನು ಮಾಡಬೇಕಾಗುತ್ತದೆ ಎಂಬುದನ್ನು ಯೋಚಿಸಿದಂತೆ ಕಾಣುವುದಿಲ್ಲ. ನಿಮ್ಮ ಚೆಲುವ ಕನ್ನಡ ನಾಡು ಎನ್ನತಕ್ಕಂತಹ ಇಂಗ್ಲಿಷ್ ಪುಸ್ತಕದ ಒಂದು ಪ್ರತಿಯ ಬೆಲೆ, ೪೫ ರೂಪಾಯಿಗಳು. ಇದರ ಪ್ರಕಾಶಕರಾದ ವಿಕಾಸ್ ಪಬ್ಲಿಷಿಂಗ್ ಹೌಸ್ ದೆಹಲಿ ಇವರಿಗೆ ಪ್ರಕಟಣೆಗಾಗಿ ೧೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಡೆಲ್ಲಿಯ ಆ ಪ್ರಕಾಶಕರು ನಿಮಗೆ ಸರಿಯಾಗಿ ನಾಮವನ್ನು ಹಾಕಿದ್ದಾರೆ. ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಡೆಲ್ಲಿಯ ಆ ಪ್ರಕಾಶಕರಿಗೆ ಕೊಟ್ಟು ಚೆಲುವ ಕನ್ನಡ ನಾಡು ಪುಸ್ತಕವನ್ನು ಪ್ರಿಂಟ್ ಮಾಡುವ ಅವಶ್ಯಕತೆ ಇತ್ತೇ? ಎಲ್ಲಾ ಬಿಟ್ಟು ಡೆಲ್ಲಿಯವರಿಗೆ ಇದರ ಕಾರ್ಯವನ್ನು ಏಕೆ ಕೊಡಲಾಯಿತು? ನಮ್ಮ ನಾಡಿನ ಬಡ ಜನರು, ಕೂಲಿಯ ಜನರು ಯಾರಾದರೂ ಇದನ್ನು ಕೊಂಡು ಕೊಂಡು ಓದುತ್ತಾರೆಯೇ? ಅಂತಹ ಜನರಿಗೆ ಇದರಿಂದ ಏನಾದರೂ ಲಾಭ ಇದೆಯೇ? ಅನಾವಶ್ಯಕವಾಗಿ ಇಂತಹ ಕೆಲಸವನ್ನು ಮಾಡಿ ನಮ್ಮ ಜನರಿಗೆ ಅನ್ಯಾಯ ಮಾಡಿದ್ದಿರಿ. ವಿಶ್ವಕನ್ನಡ ಸಮ್ಮೇಳನ ನಡೆಸಿದ್ದು ಆಯಿತು. ನಮಗೂ ಕೂಡಾ ಸಂಗೀತ, ಕಲೆ, ಇವುಗಳ ಬಗ್ಗೆ ಅಪಾರ ಅಭಿಮಾನ, ಆಸಕ್ತಿ ಇದೆ. ಆದರೆ ಅತ್ಯಾವಶ್ಯಕವಾಗಿ ಬೇಕಾಗಿಲ್ಲದೆ ಇರತಕ್ಕಂತಹ ಒಂದು ಪುಸ್ತಕಕ್ಕೆ ೧೬ ಲಕ್ಷ ರೂಪಾಯಿಗಳ ವೆಚ್ಚವನ್ನು ಮಾಡಿ, ಅದೂ ಇಂಗ್ಲಿಷ್‌ನಲ್ಲಿ ಪ್ರಿಂಟ್ ಮಾಡತಕ್ಕಂತಹ ಅವಶ್ಯಕತೆ ಇತ್ತೆ? ಎಂಬುದು ನಮ್ಮ ಪ್ರಶ್ನೆ. ಜನ ಸಾಮಾನ್ಯರಿಗೆ ಅನ್ಯಾಯ ಮಾಡುವುದಕ್ಕೂ ಒಂದು ಮಿತಿ ಇರಬೇಕು ಎಂಬುದು ನಮ್ಮ ಆಗ್ರಹ. ನಾವೇನೂ ವಿಶ್ವ ಕನ್ನಡ ಸಮ್ಮೇಳನ ಮಾಡಬೇಡಿ, ಕಲೆ ಸಂಗೀತ, ನೃತ್ಯ, ನಾಟಕಗಳನ್ನು ಮಾಡಬೇಡಿ ಎಂದು ಹೇಳುವವರಲ್ಲ. ಆದರೆ ನಮ್ಮ ಪರಿಸ್ಥಿತಿಯು ಹದಗೆಟ್ಟಿರುವ ಕಾರಣ ಇಂತಹ ಕಾರ್ಯಕ್ರಮಗಳನ್ನು ಮುಂದಕ್ಕೆ ಹಾಕಿ ಎಂಬುದು ನಮ್ಮ ವಾದವಾಗಿತ್ತು. ನಿಮಗೆ ಜನರು ಐದು ವರ್ಷಗಳ ವರೆಗೆ ಆಡಳಿತ ಮಾಡಿ ಎಂದು ಬೆಂಬಲ ಕೊಟ್ಟಿದ್ದಾರೆ. ಆದರೆ ನೀವು ಏನು ಮಾಡುತ್ತಿದ್ದೀರಿ? ಸಮ್ಮೇಳನದ ವಿಚಾರವಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರು, ಮತ್ತು ಜೀವರಾಜ ಆಳ್ವರವರು ಹೇಳಿಕೆಗಳನ್ನು ಮೇಲಿಂದ ಮೇಲೆ ಕೊಡುತ್ತಾ ಇದ್ದರು. ನಾನು ಕೇಳುವುದೇನೆಂದರೆ ನಿಮ್ಮ ಈ ಕೆಲಸದಿಂದ ಕನ್ನಡದ ಉದ್ಧಾರ ಎಷ್ಟು ಆಯಿತು? ನಿಮ್ಮ ಕೊಡುಗೆ ಎಷ್ಟು ಆಗಿದೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ? ಒಟ್ಟಿನಲ್ಲಿ ಹಣ ಖರ್ಚು ಮಾಡಿ ಸಮ್ಮೇಳನ ಮಾಡಿದ್ದೀರಿ. ಅಲ್ಲಿ ಭಾಷಣ ಆಯಿತು, ಜನರು ಕರತಾಡನ ಮಾಡಿದರು, ಜಯಕಾರ ಹಾಕಿದರು ಅಲ್ಲಿಗೆ ಸಮಾರಂಭ ಮುಗಿಯಿತು. ಆದರೆ ನಮ್ಮ ಜನರು ಬರಗಾಲದೊಂದಿಗೆ ಹೋರಾಟ

ಮಾಡುತ್ತಿದ್ದಾರೆ. ಬರಗಾಲ ಪೀಡಿತ ಪ್ರದೇಶಗಳಿಗೆ ಹೋಗಿ ಅಲ್ಲಿಯ ಜನರಿಗೆ ನಿಮ್ಮ ಮುಖವನ್ನು ತೋರಿಸಬೇಕು. ಆ ಜನರು ಹೊಟ್ಟೆಪಾಡಿಗಾಗಿ ಊರನ್ನೇ ಬಿಟ್ಟಿದ್ದಾರೆ. ಎಲ್ಲಾದರೂ ಅಂತಹ ಊರುಗಳಿಗೆ ಹೋದರೆ ನಿಮಗೆ ಆ ಪರಿಸ್ಥಿತಿಯ ಅರಿವು ಆದೀತು. ಆಗ ಅಲ್ಲಿಯ ಪರಿಸ್ಥಿತಿ ಏನಿದೆ, ವಾಸ್ತವಾಂಶ ಏನಿದೆ ಎಂಬುದನ್ನು ಗಮನಿಸಬಹುದು. ಚುನಾವಣೆಯಲ್ಲಿ ಸಾರ್ವಜನಿಕರ ಹಣವನ್ನು ಪೋಲು ಮಾಡುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಈಗ ಏನು ಮಾಡುತ್ತಿದ್ದೀರಿ?

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಬಂಗಾರಪ್ಪನವರೂ ಕೂಡಾ ಸಮಾರಂಭಕ್ಕೆ ಬಂದಿದ್ದರು. ಬರಗಾಲಕ್ಕೂ ಕನ್ನಡದ ಈ ಸಮಾರಂಭಕ್ಕೂ ಸಂಬಂಧ ಇಲ್ಲ. ಕನ್ನಡಕ್ಕೆ ಬರ ಬಾರದಿರಲಿ ಎಂದು ಡಾಕ್ಟರ್ ಶಿವರಾಮ ಕಾರಂತರವರು ಹೇಳಿದ್ದಾರೆ. ಸಮಾರಂಭಕ್ಕೆ ದೇಶದ ಪ್ರಧಾನಿಯವರೂ ಕೂಡಾ ಬಂದಿದ್ದಾರೆ. ಅವರು ತಮ್ಮ ಸಮಾಧಾನವನ್ನು ವ್ಯಕ್ತ ಮಾಡಿದ್ದಾರೆ.

ಶ್ರೀ ಬಸವನಗೌಡ ಪಾಟೀಲ್,—ಸಮ್ಮೇಳನಕ್ಕೆ ಬಂದವರಲ್ಲಿ ಜ್ಞಾನದ ವಿಷಯವಾಗಿ ಬರಗಾಲ ಇರಲಿಲ್ಲ. ಶಿವರಾಮ ಕಾರಂತರು ಸರಕಾರವನ್ನು ಹೊಗಳಲಿಕ್ಕೆ ಬಂದಿದ್ದರೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಬ್ಬರಿಗೂ ಉತ್ತರ ಕೊಡುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ,

ಉಪಾಧ್ಯಕ್ಷರು.—ಮಾನ್ಯ ನಾರಾಯಣಕುಮಾರ್ ರವರೇ, ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ನಿಮ್ಮ ಉತ್ಸಾಹ ಇದರಲ್ಲಿ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಯವ್ಯಯ ಮತ್ತು ಅವಯವ ಇಂತಹ ಶಬ್ದಗಳ ಬಳಕೆ ಮಾಡುವುದನ್ನು ಚೆನ್ನಾಗಿ ಕಲಿತುಕೊಳ್ಳಬೇಕು.

ಶ್ರೀ ಜಿ. ನಾರಾಯಣ ಕುಮಾರ್.—ಆಯವ್ಯಯ ಮತ್ತು ಅವಯವದ ಬಗ್ಗೆ ವ್ಯತ್ಯಾಸ ಗೊತ್ತಿಲ್ಲದವರು ಕನ್ನಡದವರು ಅಲ್ಲ ಎಂದು ಹೇಳಬೇಕಾಗುತ್ತದೆ, ನನಗೆ ಚೆನ್ನಾಗಿ ಕನ್ನಡ ಬರುತ್ತದೆ.

ಶ್ರೀ ಎಸ್, ಬಂಗಾರಪ್ಪ.—ನಾವೂ ಕನ್ನಡವನ್ನು ಚೆನ್ನಾಗಿ ಕಲಿತಿದ್ದೇವೆ.

ಶ್ರೀ ಜಿ. ನಾರಾಯಣಕುಮಾರ್.—ನಾನು ನಿಮಗಿಂತ ಚೆನ್ನಾಗಿ ಕಲಿತಿದ್ದೇನೆ.

ಉಪಾಧ್ಯಕ್ಷರು,—ಮಾನ್ಯ ಸದಸ್ಯರುಗಳು ಅರಿತುಕೊಳ್ಳಬೇಕು. ಅದು ಏನೆಂದರೆ ಈ ಸದನವನ್ನು ನಡೆಸುವುದಕ್ಕೆ ಒಂದು ಘಂಟೆಗೆ ೪೫ ಸಾವಿರ ರೂಪಾಯಿಗಳಷ್ಟು ವೆಚ್ಚವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶಿವರಾಮ ಕಾರಂತರ ಬಗ್ಗೆ ನೆನಪು ಮಾಡಿಕೊಟ್ಟರು. ಡಾಕ್ಟರ್ ಕಾರಂತರವರು ಒಂದು ಮಾತನ್ನು ಹೇಳಿದ್ದರು. ಅದು ಪತ್ರಿಕೆಗಳಲ್ಲಿ ಬಂದಿದೆ. ಅದು ನನ್ನ ಹತ್ತಿರ ಇದೆ. ಅದರಲ್ಲಿ ಜ್ಞಾನಕ್ಕೆ ಬರ ಇಲ್ಲ ಎಂದು ಬಂದಿದೆ. ಕನ್ನಡಪ್ರಭ ಪತ್ರಿಕೆಯಲ್ಲಿ ೧೬–೧೨-೮೫ರಲ್ಲಿ ಆ ವಿಚಾರ ಬಂದಿದೆ ಅದರಲ್ಲಿ ಬರಗಾಲ ಎಂದು ಮದುವೆ ಮಾಡುವುದನ್ನು ನಿಲ್ಲಿಸುವುದಿಲ್ಲ, ಸಿನೇಮಾ ನೋಡುವುದನ್ನು ಬಿಟ್ಟಿಲ್ಲ, ಮಸಾಲೆ ದೋಸೆ ತಿನ್ನುವುದನ್ನು ಬಿಟ್ಟಿಲ್ಲ, ಇದಕ್ಕೆಲ್ಲಾ ಬರ ಅಡ್ಡಿ ಬರುವುದಿಲ್ಲ, ಆದರೆ ಕೆಲವರು ಪ್ರಚಾರ ಪಡೆಯುವ ಉದ್ದೇಶದಿಂದ ಬರಗಾಲದ ನೆಪದಲ್ಲಿ ಈ ಮೇಳ ವಿರೋಧಿಸಿದ್ದಾರೆ ಎಂಬ ಅರ್ಥದಲ್ಲಿ ಹೇಳಿದ್ದಾರೆ. ನನಗೆ ಮಾನ್ಯ ಡಾಕ್ಟರ್ ಕಾರಂತರ ಬಗ್ಗೆ ಅಪಾರವಾದ ಗೌರವವಿದೆ. ಅವರು ಕನ್ನಡದ ಮಹಾನ್ ಸಾಹಿತಿಗಳು. ಕನ್ನಡಕ್ಕೆ ಅವರು ಸಲ್ಲಿಸಿದ ಸೇವೆ ಗಣನೀಯ.

ಸಾಹಿತ್ಯ ಕ್ಷೇತ್ರದಲ್ಲಿ ನಮಗೆ ಅಪಾರವಾದಂಥ ಗೌರವವಿದೆ. ಅದರ ಬಗ್ಗೆ ನಿಮಗೆ ಯಾರಿಗೊ ಅನುಮಾನ ಬೇಕಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ ಮಾನ ವಿರೋಧಪಕ್ಷದ ನಾಯಕರ ವಾದಕ್ಕೆ ಇಲ್ಲಿ ಯಾರು ಉತ ರ ಕೊಡುವವರು ಇದ್ದಾರೆ. ಈ ಸದನದ ಸದಸ್ಯರು ಅವರಲ್ಲ. ಆದ್ದರಿಂದ ಅವರ ಬಗ್ಗೆ ಏತಕ್ಕೆ ಪ್ರಸ್ತಾಪ ಮಾಡಬೇಕು......

ಶ್ರೀ ಎಸ್. ಬಂಗಾರಪ್ಪ.—ತಮ್ಮ ಸಲಹೆಯನ್ನು ನಿಧಾನವಾಗಿ ಪರಿಗಣಿಸೋಣ. ಈ ಸಂದರ್ಭದಲ್ಲಿ ತಾವು ಆ ವಿಷಯವನ್ನು ನೆನಪು ಮಾಡಿಕೊಟ್ಟಿದ್ದು ಒಳ್ಳೆಯದು. ನನಗೂ ಸಹ ಸಾಹಿತ್ಯದ ಬಗ್ಗೆ ಅಪಾರವಾದಂಥ ಗೌರವವಿದೆ. ಅವರು ಕನ್ನಡದ ಒಬ್ಬ ಶ್ರೇಷ್ಠ ಕವಿ ಇರಬಹುದು. ಅವರು ಒಬ್ಬ ಕನ್ನಡದ ಕವಿ ಪುಂಗವರಿರಬಹುದು. ಆದರೆ ಮಸಾಲೆದೋಸೆ ತಿನ್ನುವವರಿಗೆ, ಮದುವೆ ಮಾಡುವವರಿಗೆ

ಸಿನಿಮಾ ನೋಡುವವರಿಗೆ ತಮ್ಮ ಸ್ವಂತ ಕೆಲಸಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಖಾಸಗಿ ಹಣವನ್ನು ಖರ್ಚು ಮಾಡಿಕೊಳ್ಳುತ್ತಾರೆ. ಆದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹಣವನ್ನು ಮಸಾಲೆ ದೋಸೆ ತಿನ್ನುವುದಕ್ಕೆ ಮಂಜೂರು ಮಾಡಿಕೊಟ್ಟಿದ್ದರೇನು? ಖಾಸಗಿ ಹಣದಲ್ಲಿ ಯಾರು ಏನುಬೇಕಾದರೂ ಸ್ವಂತ ಕೆಲಸಗಳನ್ನು ಮಾಡಿಕೊಳ್ಳಬಹುದು. ಸಿನಿಮಾ ನೋಡುವವರು, ಸರ್ಕಾರದ ಹಣವನ್ನು ಖರ್ಚು ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇನು? ಸರ್ಕಾರದ ಹಣವನ್ನು ವಿನಾಕಾರಣ ಪೋಲು ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದ ಹಣ ಪೋಲಾಗುವಾಗ ಅದನ್ನು ಯಾರು ಬೇಕಾದರೂ ವ್ಯಾಖ್ಯಾನ ಮಾಡುವ ಹಕ್ಕು ಇದೆ. ಅವರು ಆ ರೀತಿ ವ್ಯಾಖ್ಯಾನ ಮಾಡಬೇಕು, ರಾಜಕಾರಣ ಮಾಡಬೇಕೆಂದಿದ್ದರೆ ಶಿವರಾಮ ಕಾರಂತರು ಚುನಾವಣೆಯಲ್ಲಿ ನಿಂತು ಗೆದ್ದು ಬರಲಿ ಶಿವರಾಮ ಕಾರಂತರು ಕನ್ನಡದ ಪುಸ್ತಕಗಳನ್ನು ಬರೆಯಬಹುದು. ಅವರ ಕನ್ನಡದ ಪುಸ್ತಕ ಹಳಿಯುವುಗಳಾದಂತೆ ಅವರ ಬುದ್ಧಿ ಮಾಸಕಾಗಬಾರದು. ಅವರು ಕನ್ನಡದ ಪುಸ್ತಕಗಳನ್ನು ಬರೆದ ಮಾತ್ರಕ್ಕೆ ಅವರಿಗೇನು ಕಿರೀಟ ಬರುವುದಿಲ್ಲ......

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಒಬ್ಬ ಕನ್ನಡದ ಕವಿಯ ಮೇಲೆ ಒಬ್ಬ ಕನ್ನಡದ ಕವಿ ಪುಂಗವರ ಮೇಲೆ, ಒಬ್ಬ ಕನ್ನಡದ ಸಾಹಿತಿಯ ಮೇಲೆ ಅನಾವಶ್ಯಕವಾಗಿ ಈ ರೀತಿ ಮಾತ ನಾಡುವುದು ಸರಿಯಲ್ಲ. ಶಿವರಾಮಕಾರಂತರನ್ನು ತಮ್ಮ ಸ್ವಕ್ಷೇತ್ರದಲ್ಲಿಯೇ ನಿಲ್ಲಿಸಿ ಗೆಲ್ಲುವಂತೆ ಮಾಡುತ್ತೇವೆ. ತಾವು ರಾಜೀನಾಮೆಯನ್ನು ಕೊಡಿ. ನನ್ನ ಸವಾಲನ್ನು ತಾವು ಸ್ವೀಕಾರ ಮಾಡಿ ರಾಜೀನಾಮೆಯನ್ನು ಕೊಟ್ಟು ಬನ್ನಿ. ಅವರನ್ನು ತಮ್ಮ ಸ್ವಂತ ಕ್ಷೇತ್ರದಲ್ಲಿ ನಿಲ್ಲಿಸಿ ಗೆಲ್ಲಸದಿದ್ದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಕನ್ನಡದ ಒಬ್ಬ ಕವಿಯ ಮೇಲೆ ತಾವು ಅನ್ಯಾವಶ್ಯಕ ವಾಗಿ ಅವಹೇಳನ ಮಾಡುವುದು ಸರಿಯಲ್ಲ, ಮಾನ್ಯ ವಿರೋಧಪಕ್ಷದ ನಾಯಕರು ಶಿವರಾಮಕಾರಂತರ ಬಗ್ಗೆ ಮಾತನಾಡಿದ ಮಾತುಗಳನ್ನು ವಾಪಸ್ ತೆಗೆದುಕೊಳ್ಳಬೇಕು......

ಶ್ರೀಮಾನ್ ಬಂಗಾರಪ್ಪನವರು ರಾಜಕಾರಣಿಗಳು ಇರಬಹುದು ಶ್ರೀಮಾನ್ ಶಿವರಾಮಕಾರಂತರು ಸಾಹಿತಿಗಳು......

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಒಬ್ಬ ಕನ್ನಡದ ಕವಿಗಳ ಬಗ್ಗೆ ಈ ತರಹ ಮಾತನಾಡುವುದು ಸರಿಯಲ್ಲ. ಅದರಲ್ಲಿಯೂ ವಿರೋಧಪಕ್ಷದ ನಾಯಕರಾಗಿ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ಛೇರ್ಮನ್.—ನಾನು ಎದ್ದು ನಿಂತಿದ್ದೇನೆ. ತಾವೆಲ್ಲ ದಯಮಾಡಿ ಕುಳಿತುಕೊಳ್ಳಿ. ನಾನು ಆಗಲೇ ಒಂದು ಮಾತು ಹೇಳಿದ್ದೇನೆ ಅದೇನೆಂದರೆ ಈ ವಿಧಾನ ಸಭೆಯನ್ನು ಒಂದು ಗಂಟೆಗಳ ಕಾಲ ನಡೆಸ ಬೇಕಾದರೆ ಸುಮಾರು ೪೫ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಇದರ ಅರ್ಥವೇನೆಂದರೆ ಸುಮ್ಮನೆ ತಾವು ಟೈಮ್ ವೇಸ್ಟ್ ಮಾಡುವುದು ತಪ್ಪು ಎಂದು.

ಶ್ರೀ ಜಿ. ನಾರಾಯಣಕುಮಾರು.—ಸ್ವಾಮಿ ಕನ್ನಡದ ಒಬ್ಬ ಕವಿಯ ಮೇಲೆ ಟೀಕೆ ಮಾಡುವುದು ಸರಿಯಲ್ಲ...

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ ಆದರೆ ಶಿವರಾಮ ಕಾರಂತರ ಬಗ್ಗೆ ಟೀಕೆ ಮಾಡುವುದು ಸರಿಯಲ್ಲ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಚರ್ಚೆ ಮಾಡುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಮಾನ್ಯ ಸದಸ್ಯರು ಯಾವುದೇ ಪಕ್ಷಕ್ಕೆ ಸೇರಿರಬಹುದು...

ಶ್ರೀ ಹೆಚ್ ಡಿ. ದೇವೇಗೌಡ.—ಸ್ವಾಮಿ ನನ್ನದೊಂದು ಕ್ರಿಯಾಲೋಪ ಇದೆ, ಈ ಸದನದ ಸದಸ್ಯರಲ್ಲದವರ ಮೇಲೆ ಏನಾದರೂ ವಿಷಯ ಬಂದಾಗ ಅವರು ಅದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸದಸ್ಯರಲ್ಲದ ವ್ಯಕ್ತಿಯ ಹೆಸರನ್ನು ಹಿಡಿದು ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ. ಅದು ನಿಯಮಕ್ಕೆ ವಿರೋಧವಾಗುತ್ತದೆ.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಶ್ರೀ ಶಿವರಾಮಕಾರಂತರ ಸಾಹಿತ್ಯದ ಬಗ್ಗೆ ಮತ್ತು ಅವರ ಪುಸ್ತಕಗಳ ಬಗ್ಗೆ ನನಗೆ ಅಪಾರವಾದ ಗೌರವವಿದೆ ಎಂದು ಮೊದಲೇ ಹೇಳಿದ್ದಾರೆ. ಪುನಃ ಏತಕ್ಕೆ ಮಾತನಾಡಬೇಕು...

ಛೇರ್ಮನ್.—ಈ ಸಭೆಯಲ್ಲಿ ಅವರ ಹೆಸರನ್ನು ಹೇಳುವಂತಹ ಅವಶ್ಯಕತೆ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಲಿ. ಅವರಿಗೆ ಅಧಿಕಾರ ಇದೆ, ಆದರೆ ಈ ಸದನದ ಸದಸ್ಯರಲ್ಲದವರ ಹೆಸರು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ವಿಶ್ವಕನ್ನಡ ಸಮ್ಮೇಳನಕ್ಕೆ ಖರ್ಚು ಮಾಡಿರ ತಕ್ಕಂಥ ಹಣ ಸರ್ಕಾರದ ಹಣ.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಪದಗಳನ್ನು ಕಡತದಿಂದ ತೆಗೆದು ಹಾಕಬೇಕು.

ಶ್ರೀ ಎಸ್. ಬಂಗಾರಪ್ಪ.—ಕಡತದಿಂದ ಏತಕ್ಕೆ ತೆಗೆದು ಹಾಕಬೇಕು ?

ಶ್ರೀ ಜಿ. ನಾರಾಯಣಕುಮಾರ್.—ಶ್ರೀ ಶಿವರಾಮಕಾರಂತರನ್ನು ಚುನಾವಣೆಯ ಕಣಕ್ಕೆ ಕರೆದದ್ದು ತಪ್ಪಾಗುತ್ತದೆ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಇರುವವರು. ಅವರು ಚುನಾವಣೆಗೆ ನಾನು ನಿಲ್ಲುತ್ತೇನೆಂದು ಎಲ್ಲಿಯೂ ಹೇಳಲಿಲ್ಲ.

ಛೇರ್ಮನ್.—ಒಬ್ಬ ವ್ಯಕ್ತಿಯ ಹೆಸರು ಎತ್ತಿ ಇಲ್ಲಿ ಮಾತನಾಡುವುದು ಸರಿಯಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಶ್ರೀ ಶಿವರಾಮ ಕಾರಂತರನ್ನು ಚುನಾವಣೆಗೆ ಕರೆದುದು ಅಪಮಾನ ಮಾಡಿದಂತಾಗಲಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಚುನಾವಣೆಗೆ ಯಾರನ್ನು ಬೇಕಾದರೂ ನಿಲ್ಲಿಸಬಹುದು. ದಲಿತರ ಕಡೆಯಿಂದ ಬೇಕಾದವರೂ ಒಬ್ಬರನ್ನು ನಿಲ್ಲಿಸಬಹುದು. ಬೇಕಾದರೆ ನಮ್ಮ ಮನೆಯ ಒಬ್ಬ ಸರ್ವೆಂಟ್ ಅನ್ನು ಕರೆಸಿ ನಾನು ಚುನಾವಣೆಗೆ ನಿಲ್ಲಿಸುತ್ತೇನೆ. ಅದು ನಿಮಗೆ ಅರ್ಥವಾಗುವುದಿಲ್ಲ...

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ ಶ್ರೀ ಶಿವರಾಮ ಕಾರಂತರನ್ನು ಎಂದು ಕರೆಯುತ್ತಾರೆ. ಈ ಸದನದ ಸದಸ್ಯರಿಗೆ ಅವರ ಬಗ್ಗೆ ಗೌರವವಿದೆ. ಇದನ್ನು ಮಾನ್ಯ ಅಧ್ಯಕ್ಷರು ಗಮನಿಸಬೇಕು. ಈ ರೀತಿ ಒಬ್ಬ ಕನ್ನಡದ ಸಾಹಿತಿಯ ಬಗ್ಗೆ ಅವಹೇಳನ ಮಾಡಿದರೆ ಇಡೀ ನಾಲ್ಕು ಕೋಟಿ ಕನ್ನಡಿಗರಿಗೂ ಅಪಮಾನ ಮಾಡಿದಂತಾಗುತ್ತದೆ. ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು.

ಛೇರ್ಮನ್.—ಮಾನ್ಯ ಸದಸ್ಯರು ಆ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರ ವಿರುದ್ಧ ಬೇಕಾದರೆ ನಮ್ಮ ಮನೆಯ ಒಬ್ಬ ಜವಾನನನ್ನು ನಿಲ್ಲಿಸಬಹುದು. ಯಾರು ಬೇಕಾದರೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಇದೆ...

ಛೇರ್ಮನ್.—ಎಲ್ಲರಿಗೂ ಹಕ್ಕು ಇದೆ,

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೇ ಜವಾನನ್ನು ಚುನಾವಣೆಯಲ್ಲಿ ನಿಲ್ಲಬಾರದು ಎಂದು ಎಲ್ಲಿ ಇದೆ ? ಅದಕ್ಕೆ...

(ಗೊಂದಲ)

ಛೇರ್ಮನ್.--ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಈ ರೀತಿಯಾದರೆ ಸಭೆ ನಡೆಸುವುದು ಹೇಗೆ ?

ಶ್ರೀ ಜೆ.ಹೆಚ್. ಪಟೇಲ್.--ಈಗಾಗಲೇ, ಮಾನ್ಯ ಸಚಿವರಾದದಂಥ ಶ್ರೀಮಾನ್ ಹೆಚ್.ಡಿ. ದೇವೇಗೌಡರು ಹೇಳಿದ ಹಾಗ ಮಾನ್ಯ ವಿರೋಧಪಕ್ಷದ ನಾಯಕರು ಶ್ರೀ ಶಿವರಾಮಕಾರಾಂತರ ಬಗ್ಗೆ ಮಾತನಾಡಬಹುದು. ಆದರೆ ಶ್ರೀ ಶಿವರಾಮಕಾರಾಂತರ ಹೆಸರು ಹಿಡಿದು ಅವರ ವ್ಯಕ್ತಿತ್ವದ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಅವರು ಅವರ ಸಾಹಿತ್ಯದ ಬಗ್ಗೆ ಮಾತನಾಡಲಿ, ನಾವು ಈಗ ಶೇಕ್ಸ್‌ಪಿಯರ್ ಬಗ್ಗೆ ಮಾನ್ಯ ಸ್ನೇಹಿತರು ಹೇಳುವುದಿಲ್ಲವೇ ?

ಆದರೆ ಚುನಾವಣೆ ಮತ್ತು ವೈಯುಕ್ತಿಕವಾದ ವಿಷಯದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಬೇಡ' ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನಾರಾಯಣ್ ಕುಮಾರ್‌ರವರಿಗೆ ಹೇಳಿ. ಮಾನ್ಯ ಸಭಾಧ್ಯಕ್ಷರೆ, ಇದು ಎಲ್ಲರಿಗೂ ಸೇರತಕ್ಕದ್ದು. ಇದು ಸಾರ್ವಜನಿಕ ಹಣದ ಬಗ್ಗೆ ಕಳಕಳಿ ಇರತಕ್ಕ ಎಲ್ಲ ಜನರ ಪ್ರತಿನಿಧಿಗಳ, ಎಲ್ಲ ಪಕ್ಷಗಳ ಆದ್ಯಕರ್ತವ್ಯ, ಪ್ರತಿನಿಧಿಗಳ ಹಕ್ಕು ಇದೆ. ಈ ಹಕ್ಕನ್ನು ಚಲಾವಣೆ ಮಾಡತಕ್ಕ ಸಂದರ್ಭದಲ್ಲಿ ಇವತ್ತು ಪ್ರಕಟ ಮತ್ತು ಪ್ರಚಾರಕ್ಕೋಸ್ಕರ ಮಾಡುತ್ತೇನೆ ಸಾರ್ವಜನಿಕ ಹಣದ ವಿಚಾರವನ್ನು ಬದಿಗೊತ್ತಿ ಎಂದು ಹೇಳತಕ್ಕಂಥ ಮಾತು ಸರ್ವಸಮ್ಮತವಲ್ಲ ಎಂದು ಹೇಳುವುದಕ್ಕೆ ಸೀಮಿಂತಗೊಳಿಸಿ ಈ ಮಾತನ್ನು ಆಡಿದ್ದೇನೆ ಈ ಸಂದರ್ಭದಲ್ಲಿ ಜನತಾಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಯುವಕರ ಬಗ್ಗೆ ಮಾತನಾಡಿದ್ದೀರಿ. ನಾನು ಒಪ್ಪುತ್ತೇನೆ, ಅವರ ಬೆಂಬಲವನ್ನು ಪಡೆದಿರಿ. ಪ್ರಣಾಳಿಕೆಯಲ್ಲಿ ಮನೆಗೆ ಒಂದೊಂದು ಉದ್ಯೋಗ ಕೊಡುತ್ತೇವೆ ಎನ್ನ ತಕ್ಕಂಥ ಮಾತನ್ನು ಆಡಿದಿರಿ. ರಾಜ್ಯಪಾಲರ ಭಾಷಣದಲ್ಲೂ ಕೂಡ ಈ ಮಾತನ್ನು ಬರೆದಿದ್ದೀರಿ. ಪ್ರಣಾಳಿಕೆಯಲ್ಲಿ ಮನೆಗೆ ಒಂದೊಂದು ಉದ್ಯೋಗ ಕೊಡುತ್ತೇವೆಂದು ಹೇಳಿದ್ದೀರಲ್ಲ ಯಾವ ಉದ್ಯೋಗ ಕೊಟ್ಟಿದ್ದೀರಿ? ಇದು ನಿಮ್ಮ ಕರ್ತವ್ಯವಲ್ಲವೆ? ಕಳೆದ ಆಯುವ್ಯಯ ಪತ್ರದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಮನೆಗೆ ಒಂದೊಂದು ಉದ್ಯೋಗ ಅಂದರೆ ಅಕ್ಷರಸ್ಥರು ಅನಕ್ಷರಸ್ಥರು ಎಂಬ ಎರಡು ವರ್ಗಗಳಿವೆ, ಈ ಎರಡೂ ವರ್ಗಗಳಿಗೆ ಏನಾದರೂ ಕಾರ್ಯಕ್ರಮ ಹಾಕುತ್ತೇವೆ ಎಂದು ಹೇಳಲಿಲ್ಲ. ಕೊನೇ ಪಕ್ಷ ನಿಮ್ಮ ಮುಂದಿನ ಆಯುವ್ಯಯ ಪತ್ರದಲ್ಲಾದರೂ ಮನೆಗೆ ಒಂದೊಂದು ಉದ್ಯೋಗ ಕೊಡಲು ಇಂತಹ ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ ಎಂದು ಹೇಳಿ. ಈಗ ಯಾರ್ಯಾರಿಗೆ ಏನೇನು ಉದ್ಯೋಗ ಕೊಟ್ಟಿದ್ದೀರಿ? ಉದ್ಯೋಗ ಹುಡುಕಿಕೊಂಡು ಹೋಗತಕ್ಕಂಥ ಉದ್ಯೋಗ ಕೊಟ್ಟಿದ್ದೀರಿ. ೧೯೮೩ ರಲ್ಲಿ ಇವರು ಅಧಿಕಾರಕ್ಕೆ ಬಂದಾಗ ಸರ್ಕಾರಿ ಇಲಾಖೆಗಳಲ್ಲಿ ೫೨ ಸಾವಿರ ಚಿಲ್ಲರೆ ಹುದ್ದೆಗಳು ಖಾಲಿ ಇದ್ದುವು. ಕೆಲವು ಜಿಲ್ಲೆಗಳಲ್ಲಿ ಉಪಾಧ್ಯಾಯರ ಸಂದರ್ಶನವನ್ನು ಮಾಡಿರುವುದನ್ನು ಬಿಟ್ಟರೆ ಸುಮಾರಾಗಿ ಉಳಿದಿರತಕ್ಕಂಥ ಯಾವ ಹುದ್ದೆಗಳನ್ನೂ ಭರ್ತಿ ಮಾಡಲಿಕ್ಕೆ ಹೋಗಲಿಲ್ಲ. ಉದ್ಯೋಗಗಳನ್ನು ಕೊಡುವುದ ಕ್ಕೋಸ್ಕರ ಉದ್ಯೋಗಗಳನ್ನು ಸೃಷ್ಟಿ ಮಾಡಿದ್ದಾರೆ ಎಂದಲ್ಲ. ನೀರಾವರಿ ಪ್ರದೇಶದಲ್ಲಿ ಜನರಿಗೆ ಉದ್ಯೋಗ ಕೊಟ್ಟಿರಬಹುದು. ಡಿಪ್ಲೋಮಾ ಹೋಲ್ಡರ್ಸ್, ಮುಂತಾದವರು ಇರುತ್ತಾರೆ, ಜನರಿಗೆ ಉದ್ಯೋಗ ಸಿಕ್ಕಿದರೆ ಅವರಿಗೂ ಅನುಕೂಲ ವಾಗುತ್ತದೆ. ಸರ್ಕಾರಕ್ಕೂ ಕೆಲಸ ಆಗುತ್ತದೆ. ಇವರು ಅಧಿಕಾರಕ್ಕೆ ಬಂದಾಗ ೫೦–೫೨ ಸಾವಿರ ಹುದ್ದೆಗಳು ಖಾಲಿ ಇದ್ದುವು, ಈ ತನಕ್‌ವರೆಗೆ ೭೨–೭೩ ಸಾವಿರ ಹುದ್ದೆಗಳು ಖಾಲಿ ಇವೆ. ನೀವು ಯಾವ ಅರ್ಜಿಗಳನ್ನು ಕರೆದಿದ್ದೀರಿ? ನಿಮ್ಮಿಂದ ಕರೆಯುವುದಕ್ಕೆ ಆಗುವುದಿಲ್ಲ, ನನಗೆ ಗೊತ್ತಿದೆ. ಇದು ಕಾಳಜಿ ವಹಿಸತಕ್ಕ ಮಾತಾಯಿತು. ಯಾವಾಗ ವಿಫಲವಾಯಿತು ಆಗ ಕುತಂತ್ರಕ್ಕೆ ಹೋಗಿ ನಿಲ್ಲುವುದು. ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಯುವಕನಿಗೆ ಅಪ್ಲಿಕೇಷನ್ ಕರೆದು ಸಂದರ್ಶನ ಮಾಡಿ ಕೆಲಸವನ್ನು ಕೊಟ್ಟಿದ್ದೀರಿ? ೭೨ ಸಾವಿರ ಜನರಿಗೆ ಕೊಡಿ ಎಂದು ಹೇಳುವುದಿಲ್ಲ. ಕೊನೇ ಪಕ್ಷ ಶೇಕಡ ೨೫ ರಷ್ಟು, ೬೦ ೫೦ ರಷ್ಟು ಜನಕ್ಕಾದರೂ ಉದ್ಯೋಗವನ್ನು ಕೊಡತಕ್ಕ ಪ್ರಾಮಾಣಿಕ ಪ್ರಯತ್ನ

ನಡೆಯಬೇಕಾಗಿತ್ತು. ಕಳೆದ ವರ್ಷದ ಬಜೆಟ್‌ನಲ್ಲಿ ಈ ವಿಚಾರ ಇಲ್ಲ. ಈ ವರ್ಷದಲ್ಲಾದರೂ ಈ ಬಗ್ಗೆ ಹೇಳತಕ್ಕಂಥ ಶಕ್ತಿ ಪಡೆದಿಲ್ಲ. ಕರ್ನಾಟಕ ರಾಜ್ಯದಲ್ಲಿ ಇವತ್ತು ಉದ್ಯೋಗವನ್ನು ಹುಡುಕಿಕೊಂಡು ಹೋಗತಕ್ಕಂಥ ಉದ್ಯೋಗವನ್ನು ಕೊಟ್ಟಿರಿ. ಇವತ್ತು ೧೭ ಜಿಲ್ಲೆಗಳಲ್ಲಿ ಬರಗಾಲ ಇದೆ, ಕೊಡಗು ಜಿಲ್ಲೆಯ ೮೬ ಹಳ್ಳಿಗಳಿಗೂ ಸೇರಿದಂತೆ ೪ ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೀರಿ. ಈ ಹದಿನೇಳೂವರೆ ಜಿಲ್ಲೆಗಳಲ್ಲಿ ಇರತಕ್ಕ ಅನಕ್ಷರಸ್ಥರರಿಗೆ ಏನು ಉದ್ಯೋಗ ಕೊಟ್ಟಿದ್ದೀರಿ? ನಿಮ್ಮ ಬರಗಾಲದ ಕಾರ್ಯಕ್ರಮಗಳು ಸಂಪೂರ್ಣವಾಗಿ ವಿಫಲವಾಗಿವೆ. ಗುಳೇ ಕಿತ್ತುಕೊಂಡು ಊರಿಂದೂರಿಗೆ ಹೋಗತಕ್ಕ ಕೆಲಸವನ್ನು ಕೊಟ್ಟಿದ್ದೀರಿ. ದನಗಳನ್ನು ಕಟುಕರ ಸಂತೆಗಳಿಗೆ ಕಳಿಸುತ್ತಿದ್ದಾರೆ. ಒಬ್ಬ ರೈತ ದನಕರುಗಳನ್ನು ತೆಗೆದುಕೊಂಡರೆ ಅದಕ್ಕೆ ಮೇವು ಹಾಕುವುದು ಇರಲಿ, ಅವನಿಗೆ ತಿನ್ನುವುದಕ್ಕೆ ಅನ್ನವಿಲ್ಲ. ಈ ಸಂದರ್ಭದಲ್ಲಿ ಸಂತೆಗಳಲ್ಲಿ ಮಾರಾಟ ಮಾಡುವವರು ರೈತರು, ತೆಗೆದುಕೊಳ್ಳುವವರು ಕಟುಕರು. ಕಟುಕರಿಗಾಗಿ ಸಂತೆಯನ್ನು ನಡೆಸುತ್ತಿದ್ದಾರೆ. ಇವತ್ತು ಕರ್ನಾಟಕದಲ್ಲಿ ಶೇಕಡ ೮೫-೯೦ ಭಾಗ ಕಟುಕರ ಸಂತೆಗಳಾಗಿವೆ. ಇದು ನಿಮ್ಮ ಕಾಲದಲ್ಲಿ ಅವ್ಯಾಹತವಾಗಿ ನಡೆಯುತಿದೆ. ಇವತ್ತು ಸಂಪೂರ್ಣವಾಗಿ ಜನರು ಗುಳೇ ಕಿತ್ತುಕೊಂಡು, ವಲಸೆ ಹೋಗತಕ್ಕಂಥ ಪರಿಸ್ಥಿತಿ ಇದೆ. ಜನರು ಉದ್ಯೋಗವನ್ನು ಹುಡುಕಿಕೊಂಡು ಹೋಗತಕ್ಕಂಥ ಉದ್ಯೋಗವನ್ನು ಅವರಿಗೆ ಹಚ್ಚಿದ್ದೀರಿ, ಇದೇ ನೀವು ಕೊಟ್ಟಿರತಕ್ಕ ಕೆಲಸ. ಇನ್ನು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಗೃಹಿಣಿಯರ ಬಗ್ಗೆ ಹೇಳಿದ್ದೀರಿ. ನಿಮ್ಮ ಪಕ್ಷಕ್ಕೆ ಬಹುಮತ ಲಭ್ಯವಾಯಿತು, ಆ ಮಾತನ್ನು ನಾನು ಒಪ್ಪುತ್ತೇನೆ. ಆ ಜನರ ಮಂಗಲ ಸೂತ್ರವನ್ನು ಹಾಡು ಹಗಲಲ್ಲೇ ಕಿತ್ತುಕೊಂಡು ಹೋದಾಗ, ಕೊಲೆ ಸುಲಿಗೆಗಳು, ದರೋಡೆಗಳು ನಡೆದಾಗ, ಯಾವ ಜನ ನಿಮಗೆ ನಂಬಿಕೆ ಕೊಟ್ಟರೋ ಸಮಾಜದಲ್ಲಿರತಕ್ಕ ಇಂತಹ ವರ್ಗದವರು, ನಿಮಗೆ ಬೆಂಬಲ ಕೊಟ್ಟವರು ನಿಮ್ಮ ಮೇಲೆ ಇಟ್ಟಿರತಕ್ಕ ನಂಬಿಕೆ ಸಂಪೂರ್ಣ ನಾಶವಾಗಿ ಹೋಯಿತು. ಜನತಾ ಪಕ್ಷದ ಪ್ರಣಾಳಿಕೆಯಲ್ಲಿ "ಹೊಸ ಕೇಂದ್ರ ಸರ್ಕಾರವೂ ಕೂಡ ನಮ್ಮ ಸರ್ಕಾರದ ಧೋರಣೆಗಳು ಹಾಗೂ ಕಾರ್ಯವಿಧಾನವನ್ನು ಅನುಸರಿಸುತ್ತಿರುವುದು ಗಮನಾರ್ಹವಾಗಿದೆ'' ಎಂದು ಹೇಳಿದ್ದಾರೆ, ರಾಜಮಹಾರಾಜರನ್ನು ನಮ್ಮ ಹಿಂದಿನವರು ನೋಡಿದ್ದಾರೆ, ನಾವು ಅವರ ಕತೆ ಕೇಳಿದ್ದೇವೆ, ನಾವು ನೋಡಲಿಲ್ಲ ಸೈನ್ಯ, ಮಂತ್ರಿಗಳು, ಬಹುಪರಾಕ್ ಹೇಳುವವರು, ಮಹಾರಾಜರು, ಅರಮನೆಗಳು–ಇವೆಲ್ಲಾ ಬೇಕಾಗುತ್ತದೆ ಏನೂ ಇಲ್ಲದೆ ನನ್ನ ತಲೆ ಮೇಲೆ ಕಿರೀಟ ಇಟ್ಟುಕೊಂಡು ಹೊಗಳಿಕೊಂಡು ಬಿಡುವುದು. ನಾವು ಮಾಡಿರತಕ್ಕ ರಾಜಕಾರಣವನ್ನು ಕೇಂದ್ರ ಅನುಸರಿಸುತ್ತಿದೆ ಎಂದು ಹೇಳುವುದು. ನನ್ನ ತಲೆ ಮೇಲೆ ಕಿರೀಟ ಇಟ್ಟುಕೊಂಡು ನನ್ನನ್ನು ನಾನೇ ಮಹಾರಾಜ ಎಂದು ಹೊಗಳಿಕೊಂಡು ಬಿಡುವುದು. ಪ್ರಣಾಳಿಕೆಯಲ್ಲಿ "ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳ ಜೊತೆಗೆ ಜನತಾ ಸರ್ಕಾರದ ಮೌಲ್ಯಾಧರಿತ ರಾಜಕೀಯ ಪುನರುಜ್ಜೀವನದ ಪ್ರಯತ್ನವನ್ನು ಕೇಂದ್ರ ಸರ್ಕಾರವೂ ಜಾರಿಗೆ ತರುವಲ್ಲಿ ನಿರತವಾಗಿದೆ" ಎಂದು ಹೇಳಿದ್ದಾರೆ ಇದನ್ನು ಪೂರ್ವಪೀಠಿಕೆಯಲ್ಲಿ ಹೇಳಿದ್ದಾರೆ ರಾಮಕೃಷ್ಣ ಹೆಗಡೆಯವರು ರಾಜೀವಗಾಂಧಿಯವರನ್ನು ಹೊಗಳಿದರು. ಅದು ಪತ್ರಿಕೆಯಲ್ಲಿ ಬಂತು, ನಿಮ್ಮ ನಾಯಕರೇ ಆ ಮಾತನ್ನು ಒಪ್ಪಿದ್ದಾರೆ. ನಿಜವಾಗಿಯೂ ರಾಜೀವ ಗಾಂಧಿಯವರು ಒಳ್ಳೆಯ ವ್ಯಕ್ತಿಗಳು, ಒಳ್ಳೆಯ ಆಡಳಿತವನ್ನು ಕೊಡುತ್ತಿದ್ದಾರೆ ಎನ್ನತಕ್ಕ ಮಾತನ್ನು ಆಡಿದ್ದಾರೆ, ಇವತ್ತು ಮೌಲ್ಯಾಧರಿತ ರಾಜಕರಣ ಯಾವ ಮಟ್ಟಕ್ಕೆ ಬಂದಿದೆ ಎನ್ನುವುದು ಅವರ ಮಾತಿನಿಂದ ಗೊತ್ತಾಗುತ್ತದೆ. ಮೌಲ್ಯಾಧರಿತ ರಾಜಕಾರಣ ಸಧ್ಯದಲ್ಲಿ ಸ್ಥಗಿತಗೊಂಡಿದೆ ಎಂದು ಭಾವಿಸೋಣವೆ? ಬರತಕ್ಕಂಥ ದಿನಗಳಲ್ಲಿ ಈ ಮೌಲಾಧರಿತ ರಾಜಕಾರಣದ ಶಕ್ತಿ ಸೊರಗಿದೆ, ಉಡುಗಿ ಹೋಗಿದೆ ಎನ್ನತಕ್ಕಂಥ ಮಾತನ್ನು ಇಟ್ಟು ಕೊಳ್ಳೋಣವೆ?

ಮಾನ್ಯ ಸಭಾಧ್ಯಕ್ಷರೇ, ಇವರು ಗ್ರಾಮ ಸ್ವರಾಜ್ಯ ಮಂಡಲಿ ಪಂಚಾಯಿತಿಗಳು, ಜಿಲ್ಲಾ ಪರಿಷತ್ತು, ನ್ಯಾಯ ಪಂಚಾಯಿತಿಗಳ ಚುನಾವಣೆಗಳನ್ನು, ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮಾಡುತ್ತೇವೆಂದು ಹೇಳಿರುವುದನ್ನು ಇವತ್ತಿನ ಪತ್ರಿಕೆಯನ್ನು ನೋಡಿದ್ದೇನೆ. ಅವರು ಚುನಾವಣೆಗಳನ್ನು ನಡೆಸುವುದು ಅಥವಾ ಬಿಡುವುದು ಅವರಿಗೆ ಬಿಟ್ಟಿರುವ ವಿಚಾರ. ಅದರ ಬಗ್ಗೆ ಜನ ಇದ್ದಾರೆ. ಈ ವಿಚಾರದಲ್ಲಿ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಜಿಲ್ಲಾ ಪರಿಷತ್ತು ಚುನಾವಣೆ ಮತ್ತು ಮಂಡಲ್ ಪಂಚಾಯಿತಿ ವಿಚಾರದಲ್ಲಿ ಕ್ಷೇತ್ರಗಳ ವಿಂಗಡಣೆಯಲ್ಲಿ ಕಾನೂನಿಗೆ ವಿರುದ್ಧವಾಗಿ ನಿಮ್ಮ ಪಕ್ಷದ ಹಸ್ತಕ್ಷೇಪ ಎಲ್ಲಾ ಕಡೆ ನಡೆದಿದೆ. ಈಗಾಗಲೇ ಈ ಬಗ್ಗೆ ವೇಳೆ ಮುಗಿದಿದೆ. ಕೆಲವು ಸಂದರ್ಭಗಳಲ್ಲಿ ಅನೇಕ ವಿಚಾರ

ಗಳು ಕೋರ್ಟಿಗೆ ಹೋಗುವುದನ್ನು ನಾವು ನೋಡುತ್ತಿದ್ದೇವೆ. ಪಕ್ಷದ ರಾಜಕಾರಣಕ್ಕೆ ಎಲ್ಲರೂ ಹೊಗಳಿ ಮಾಡಿದ್ದೇ ಮಾಡಿದ್ದು. ಕಲಂಗಳನ್ನು ನೋಡಿದರೆ, ಸೆಕ್ಷನ್‌ಗಳನ್ನು ನೋಡಿದರೆ, ಸೆಂಟ್ರಲ್ ಸ್ಟ್ಯಾಂಡ್ ಪವರ್ಸ್ ಒಂದು ರಾಶಿರಾಶಿಯಾಗಿ ಬಿದ್ದಿವೆ. ಇದು ಯಾವುದೇ ವಿಚಾರಗಳ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ನಾನು ನಮ್ಮ ಪಕ್ಷದ ಬಗ್ಗೆ ಮಾತನಾಡುವುದಕ್ಕೆ ಸಿದ್ಧನಾಗಿದ್ದೇನೆ. ಯಾವುದೇ ಸಂದರ್ಭದಲ್ಲಿ ನಾವು ಎದುರಿಸುತ್ತೇವೆ. ಈಗ ಒಂದು ವಿಚಾರ. ಬಾಯಾರಿದವನಿಗೆ ಕುಡಿಯುವ ನೀರನ್ನು ಕೊಡ ತಕ್ಕ ವಿಚಾರ. ಪುನಃ ರಾಜ್ಯಪಾಲರ ಭಾಷಣದಲ್ಲಿ ನೀವು ಇದನ್ನು ಪ್ರಸ್ತಾಪ ಮಾಡಿದ್ದೀರಿ. ನೀವು ಕುಡಿಯುವ ನೀರಿನ ಬಾವಿಗಳನ್ನು ಎಷ್ಟು ತೋಡಿಸಿದ್ದೀರಿ? ನಮ್ಮ ಪಕ್ಷದ ಸರಕಾರ ಇದ್ದಾಗ ಎಷ್ಟು ಬಾವಿಗಳನ್ನು ತೋಡಿಸಿತ್ತೋ, ಅವುಗಳನ್ನು ಕಳೆದು ಹೇಳಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವರಿಗೆ ಕುಡಿಯುವ ನೀರಿನ ಬಾವಿಗಳನ್ನು ರಿಪೇರಿ ಮಾಡುವುದಕ್ಕೂ ಆಗುತ್ತಾ ಇಲ್ಲ. ಇವರಿಗೆ ವಾಹನದ ಸೌಕರ್ಯ ಇಲ್ಲ. ನಾನು ನೂರು ಹ್ಯಾಂಡ್ ಪಂಪ್‌ಗಳು ಕೆಟ್ಟು ಹೋಗಿರುವುದನ್ನು ಕಣ್ಣಾರೆ ನೋಡಿದ್ದೇನೆ. ಮೊಬೈಲ್ ವ್ಯಾನ್ ಹಾಕಿ, ತಕ್ಷಣ ಇಂತಹ ಹ್ಯಾಂಡ್ ಪಂಪ್‌ಗಳ ರಿಪೇರಿ ಮಾಡಿಸಿ ಎಂದು ಹೇಳಿದೆ, ಇವತ್ತಿನವರೆಗೂ ಆಗಿಲ್ಲ. ಬರೀ ಬಾವಿಗಳ ಪಟ್ಟಿಯನ್ನು ಕೊಡುವಂತಹದ್ದಲ್ಲ. ಬಾವಿ ತೋಡಿಸಿ, ಎಷ್ಟು ನೀರು ಕೊಟ್ಟರೂ ಎಂಬುದು ಮುಖ್ಯ. ಅಲ್ಲದೆ ಒಂದು ಬಾವಿಗೆ ಬಹು ಮೊತ್ತ ಕೊಟ್ಟು ಅಧಿಕಾರಿಗಳು ಕುರ್ಚಿಯ ಮೇಲೆ ಕುಳಿತರೆ ಸಾಲದು. ಜನತೆಗೆ ಏನು ಅನುಕೂಲ ಮಾಡಿದರು ಏನು ಸಾಧನೆ ಮಾಡಿದರು ಎಂಬುದು ಮುಖ್ಯ. ಇಲ್ಲದೇ ಹೋದರೆ ಅದು ಪ್ರಜಾಪ್ರಭುತ್ವ ಕೂಡ ಆಗುವುದಿಲ್ಲ. ಬಾವಿಗಳ ಸಂಖ್ಯೆಯನ್ನು ಹೇಳಿ, ಹೇಳಿ ಜನರನ್ನು ವಂಚನೆ ಮಾಡುವ ತಂತ್ರವನ್ನು ಕೈಬಿಡುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ತಾಳಿಯ ಭಾಗ್ಯದ ಬಗ್ಗೆ ಮಾತನ್ನು ಕೊಟ್ಟರಿ. ಇದರ ಬಗ್ಗೆ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಪ್ರವಾಸ ಮಾಡುವ ಕಾಲದಲ್ಲಿ ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ಒಂದು ಕಾರ್ಯಕ್ರಮ ಜರುಗಿರುವುದು ತಿಳಿದು ಬಂತು. ತಾಳಿಯ ಭಾಗ್ಯ ಕೊಡುವುದು, ಯಾರ್ಯಾರು ಕಾನೂನು ಪ್ರಕಾರ ಮದುವೆ ಆಗಿರುವುದಲ್ಲ, ಮತ್ತು ಅವರ ವಯಸ್ಸೆಷ್ಟು ಎಂಬುದರ ಮೇಲೆ ನಿರ್ಧರಿಸಬೇಕಾಗುತ್ತದೆ. ನೀವು ಬಂಗಾರದ ತಾಳಿ ಕೊಡಿ, ಸೀರೆ ಕೊಡಿ, ವಜ್ರವನ್ನು ಕೊಡಿ, ಅದರ ಬಗ್ಗೆ ನಮ್ಮದು ಅಭ್ಯಂತರ ಇಲ್ಲ. ಬಡವರ ಬಗ್ಗೆ ಕಾಳಜಿ ವಹಿಸಿ, ಒಳ್ಳೆಯ ಕಾರ್ಯಕ್ರಮಗಳನ್ನು ತನ್ನಿ. ಅವುಗಳ ಬಗ್ಗೆ ನಾವೂ ಬೆಂಬಲ ಕೊಡುತ್ತೇವೆ. ತಾಳಿಯ ಭಾಗ್ಯ ಯೋಜನೆ ಮಾಡಬೇಕಾದರೆ, ಅಲ್ಲಿ ಮದುವೆ ಆಗತಕ್ಕಂಥವರು ಯಾರು ಎಂಬುದನ್ನು ವಿಚಾರ ಮಾಡಬೇಕು. ಈ ವಿಚಾರದಲ್ಲಿ ಅಧಿಕಾರಿಗಳು ತಪ್ಪು ಮಾಡಿದರೆ ನಾಳೆ ನಿಮ್ಮ ತಲೆಗೆ ಬರುತ್ತದೆ. ಕುಷ್ಟಗಿಯಲ್ಲಿ ೫೦ ಮದುವೆಗಳನ್ನು ಮಾಡಿದ್ದಾರೆ. ೫೦ ಮದುವೆಗಳಲ್ಲಿ ೧೦ ಮದುವೆಗಳು ಬಾಲ್ಯ ವಿವಾಹ ಆಗಿವೆ. ಇದರ ಬಗ್ಗೆ ಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ಹೇಳಬೇಕು. ಪತ್ರಿಕಾಕರ್ತರೂ ಇದ್ದಾರೆ, ಅವರೂ ಕೂಡ ಫೋಟೋ ತೆಗೆದಿದ್ದಾರೆ. ಎಲ್ಲರೂ ಇದ್ದು, ಆಗಿರತಕ್ಕಂಥ ಸಮಾರಂಭವಿದು. ದಿನಾಂಕ ೨೪-೧೨-೮೫ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಬಂದ ವರದಿ ಈ ರೀತಿ ಇದೆ. "ಕುಷ್ಟಗಿ ತಾಲ್ಲೂಕಿನ ಗೊಟಗಿ ಗ್ರಾಮದಲ್ಲಿ ಜನತಾ ಸರ್ಕಾರದ ಜನಪ್ರಿಯ ತಾಳಿಭಾಗ್ಯ ಯೋಜನೆಯನ್ವಯ ೫೦ ಜೊತೆ ಸಾಮೂಹಿಕ ವಿವಾಹದಲ್ಲಿ ೧೦ ಬಾಲವಿವಾಹಗಳ ನಡೆದಿರುವುದು ಬೆಳಕಿಗೆ ಬಂದಿದೆ. ಕಳೆದ ಶನಿವಾರ ನಡೆದ ಈ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ವಧುವಿಗೆ ಒಂದು ಚಿನ್ನದ ಮಾಂಗಲ್ಯ, ಒಂದು ಸೀರೆ ಹಾಗೂ ವರನಿಗೆ ಒಂದು ಧೋತಿ ಮತ್ತು ಷರ್ಟನ್ನು ನೀಡಲಾಯಿತು. ರಾಯಚೂರು ಜಿಲ್ಲೆಗೆ ಈ ತಾಳಿಭಾಗ ಕಾರ್ಯಕ್ರಮ ಜಾರಿಯಾದದ್ದೇ ಈ ಸಮಾರಂಭದ ಮೂಲಕ. ಅಲ್ಲದೆ ತಾಳಿ ಭಾಗ್ಯ ಯೋಜನೆಯನ್ವಯ ಸಾಮೂಹಿಕ ವಿವಾಹ ನಡೆದದ್ದು ಇಡೀ ರಾಜ್ಯದಲ್ಲಿ ಇದೇ ಮೊದಲನೆಯದೆಂದು ಹೇಳಲಾಗಿದೆ. ಈ ಸಮಾರಂಭದಲ್ಲಿ ಬಾಲವಧೂವರರು ಮಾಂಗಲ್ಯ ಹಾಗೂ ಉಡುಪುಗಳನ್ನು ಸ್ವೀಕರಿಸಲು ಬಂದಾಗ ಸಮಾರಂಭವನ್ನು ಉದ್ಘಾಟಿಸಿದ ಜಿಲ್ಲಾ ನ್ಯಾಯಾಧೀಶ ಎಲ್. ಬಿ. ಮಣಿಕಟ್ಟಿಯವರು ಸೇರಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಆಶ್ಚರ್ಯಚಕಿತರಾದರು. ಸಮಾರಂಭವನ್ನು ಗೊಟಗಿಯ ಸ್ವಯಂಸೇವಾ ಸಂಸ್ಥೆಯಾದ ಮಾರುತಿ ಯುವಕ ಮಂಡಲಿ ಏರ್ಪಡಿಸಿದ್ದು. ಸಮಾರಂಭಕ್ಕೆ ಬಾಲ ವಧೂವರರು ಬರುತ್ತಾರೆಂದೂ ಕುಷ್ಟಗಿಯ ತಹಸೀಲ್ದಾರರೂ ಸೇರಿ ಇತರೆ ಅಧಿಕಾರಿಗಳಿಗೆ ತಿಳಿದಿರಲಿಲ್ಲವೆಂದೂ ಹೇಳಲಾಗಿದೆ.

ಜಿಲ್ಲಾಧಿಕಾರಿ ಮಣಿಕಟ್ಟಿಯವರು ಸಂದಿಗ್ಧ ಪರಿಸ್ಥಿತಿಗೆ ಒಳಗಾದರೂ ಆ ಬಾಲ ವಧೂವರರಿಗೆ ಅನಿವಾರ್ಯವಾಗಿ ಮಾಂಗಲ್ಯ ಮತ್ತು ಉಡುಪುಗಳನ್ನು ಹಂಚಲೇಬೇಕಾಯಿತು. ಈ ಪ್ರಕರಣದ ಬಗ್ಗೆ

ಮೌನ ತಳೆಯಲಾಗದು. ಸಮಾರಂಭದ ಮುಖ್ಯ ಅತಿಥಿ ವಿಧಾನಸಭಾ ಸದಸ್ಯ ಎಂ. ಎಸ್. ಪಾಟೀಲ್ ಅವರು ಸರ್ಕಾರಿ ಶಾಸನಗಳಿಂದಲೇ ಸಂಧಾರಣೆ ಅಸಾಧ್ಯವೆಂದೂ ಬಾಲ ವಿವಾಹದಂಥ ಸಾಮಾಜಿಕ ಪಿಡುಗುಗಳ ಬಗ್ಗೆ ಜನತೆಯೇ ಯೋಚಿಸಬೇಕೆಂದೂ ಹೇಳಿದರಲ್ಲದೆ, ಈ ಪ್ರಕರಣದ ಬಗ್ಗೆ ವಿಷಾದಿಸಿದರು. ಮಾಜಿ ವಿಧಾನಸಭಾ ಸದಸ್ಯ ಕಾಂತಾರಾವ್ ದೇಸಾಯಿ ಅವರು ಅಧ್ಯಕ್ಷತೆ ವಹಿಸಿದ್ದರು. ಬಹುತೇಕ ವಧೂವರರು ನೆರೆಯ ಬಿಜಾಪುರ ಜಿಲ್ಲೆಯೂ ಸೇರಿ, ಸುತ್ತಮುತ್ತಲಿನ ಗ್ರಾಮಗಳವರು. ಒಂದು ವಧುವಂತೂ ಕೇವಲ ೪ ವರ್ಷದ ಹುಡುಗಿ, ಅದನ್ನು ಅದರ ತಾಯಿ ಹೊತ್ತುಕೊಂಡು ಬಂದಳು.

ಸಮಾಜ ಕಲ್ಯಾಣ ಇನ್‌ಸ್ಪೆಕ್ಟರ್ ವಿ. ಎಸ್. ಕುಲಕರ್ಣಿಯವರು ಸ್ವಾಗತಿಸಿ ಮಾರುತಿ ಯುವಕ ಮಂಡಲಿಯ ಮ್ಯಾನೇಜರ್ ರಮೇಶ ದೇಶಾಯ್ ವಂದನಾರ್ಪಣೆ ಮಾಡಿದರು.

ಶ್ರೀ ಜೆ. ಹೆಚ್. ಪಟೇಲ್.—ವಧುವನ್ನು ಕಂಕುಳದಲ್ಲಿ ಎತ್ತಿಕೊಂಡು ಬಂದರು, ಆದರೆ ವರನನ್ನು ಯಾವರೀತಿ ಕರೆದುಕೊಂಡು ಬಂದರು?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ತಪ್ಪನ್ನು ವಿನಾಕಾರಣ ದೂರುತ್ತಾ ಇಲ್ಲ. ಒಂದು ಹುಡುಗಿಯನ್ನು ಕಂಕುಳದಲ್ಲಿ ಹೊತ್ತುಕೊಂಡು ಬಂದರು ಎಂದರೆ, ಅದರ ಗಂಡನ್ನು ಹೆಗಲ ಮೇಲೆ ಹೊತ್ತುಕೊಂಡು ಬರಬೇಕಾಗುತ್ತದೆ. ಬಾಲ್ಯ ವಿವಾಹ ಮಾಡಿದರೆ, ಕಾನೂನು ಪ್ರಕಾರ, ತಂದೆ ತಾಯಿಗಳಿಗೆ ಶಿಕ್ಷೆ ಇದೆ. ಇಂತಹ ಇನ್ನೂ ಅನೇಕ ಪ್ರಕರಣಗಳ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತೇವೆಂದು ಹೇಳಿರುತ್ತಾರೆ.

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ಎನ್‌ಕ್ವೈರಿ ಮಾಡುವುದಿಲ್ಲ, ತಾಳಿಯ ಭಾಗ್ಯ ಯೋಜನೆ ಮಾಡಿ, ಬಾಲ್ಯವಿವಾಹ ನಡೆಸುತ್ತಿರತಕ್ಕಂಥ ಈ ಸರ್ಕಾರಕ್ಕೆ ಶಿಕ್ಷೆ ಕೊಡಬೇಕು. That is the moot point here.

ಅಧ್ಯಕ್ಷರು ತಾವು ಒಳ್ಳೆಯ ಸಲಹೆ ಕೊಡಿ. ನಿಮ್ಮ ಸಲಹೆಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ತಪ್ಪಾಗಿದೆ ಎಂದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ತಪ್ಪು ಎಲ್ಲೇ ಮಾಡಿದರೂ ಸರ್ಕಾರ ಹೊಣೆ ಹೊರಲೇ ಬೇಕಾಗುತ್ತದೆ. ಇದು ಸರ್ಕಾರದ ನೈತಿಕ ಹೊಣೆ. ನೀವು ಕ್ರಮ ತೆಗೆದುಕೊಳ್ಳಿ ಎಂದರೆ, ಇದರ ಬಗ್ಗೆ ಒಬ್ಬ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಬಹುದು. ತಹಶೀಲ್ದಾರರನ್ನು ಮನೆಗೆ ಕಳುಹಿಸಬಹುದು, ಇದು ನೀವು ತೆಗೆದುಕೊಳ್ಳತಕ್ಕ ಕಾರ್ಯಕ್ರಮ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಪೋಲೀಸ್ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಳ್ಳಬಹುದು, ಸಂಬಂಧಪಟ್ಟ ಆಫೀಸರುಗಳ ಮೇಲೂ ಕ್ರಮ ತೆಗೆದುಕೊಳ್ಳಬಹುದು, ಮಧ್ಯಸ್ಥಿಕೆ ವಹಿಸಿ ಮದುವೆ ಮಾಡಿದವರ ಮೇಲೂ ಕ್ರಮ ಜರುಗಿಸಬಹುದು, ಇದಕ್ಕೆ ಕಾನೂನಿನಲ್ಲಿ ಅವಕಾಶ ಇದೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅಭಿಪ್ರಾಯ ನಮಗೂ ಗೊತ್ತು. ನಾವೂ ನೀವು ಅಕ್ಕಪಕ್ಕದ ಕ್ಷೇತ್ರದವರು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನೈತಿಕ ಹೊಣೆಯನ್ನು ಸರ್ಕಾರ ಹೊರಬೇಕು. ಏತಕ್ಕೆಂದರೆ ತಮ್ಮ ಯೋಜನೆ ತಾಳಿ ಭಾಗ್ಯದ ಯೋಜನೆ ಏನು ಇದೆ ಹುಡುಗನಿಗೆ ಧೋತ್ರ ಕೊಡುವುದು, ಹುಡುಗಿಗೆ ಸೀರೆ ಕೊಡುವುದು ಅಂತ ಏನು ಮಾಡಿದ್ದೀರಿ ಇದರಲ್ಲಿ ಏನು ಅನ್ಯಾಯವಾಗಿದೆ ಎಂದರೆ, ಇದರಲ್ಲಿ ಬಾಲ ವಿವಾಹ ಆಗಿದೆ. ಕಂಕುಳಲ್ಲಿ ಒಂದು ಹೆಣ್ಣುಮಗುವನ್ನು ಎತ್ತಿಕೊಂಡು ಮದುವೆ ಮಾಡಿಸುವುದಕ್ಕೆ ಕರೆಸಿದ್ದೀರಿ. ಇದರ ಹೊಣೆಗಾರಿಕೆ ನಿಮ್ಮದಾಗುವುದಿಲ್ಲವೇ ? ಅಲ್ಲದೆ ಕೆಲವು ಹೆಣ್ಣು ಮಕ್ಕಳಿಗೆ ಲಂಗ ಹಾಕಿಸಿ, ಹುಡುಗನಿಗೆ ನಿಕ್ಕರ್ ಹಾಕಿಸಿ ತಾಳಿ ಕಟ್ಟಿಸಿದ್ದೀರಿ ! ಇದು ಕಾನೂನಿಗೆ ವಿರುದ್ಧವಲ್ಲವೇ ? ಯಾರು ಈ ಕಾನೂನನ್ನು ಜಾರಿಗೆ ತರಬೇಕು ಅವರೇ ಮುರಿದರೆ ಅವರೇ ಸರ್ಕಾರದ ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡಿಸಿದರೆ, ಬಾಲವಿವಾಹ ಮಾಡಿಸಿದರೆ ೧೯೭೮ರ ಈ ಕಾನೂನಿನ ಪ್ರಕಾರ ಅವರು ತಪ್ಪಿತಸ್ಥರಾಗಿರುವುದರಿಂದ, ಆ

ಹೊಣೆಗಾರಿಕೆಯನ್ನು ಹೊತ್ತಂಥ ತಾವು ಏನು ಇದ್ದೀರಿ, ಈ ತಪ್ಪು ನಿಮ್ಮದಾಗುವುದಿಲ್ಲವೆ, ಆದುದರಿಂದ ಮೊದಲು ತಪ್ಪಿತಸ್ಥರು ನೀವೇ ಆಗಬೇಕೇ ವಿನಹ ಇನ್ನಾರೂ ಅಲ್ಲ.

ಶ್ರೀ ವೈ. ಕೆ. ರಾಮಯ್ಯ.—ಕಾನೂನಿನ ಪ್ರಕಾರ ಇರುವುದು ಅವರಿಗೆ ಸಂಬಂಧಪಟ್ಟ ತಂದೆ ತಾಯಿಗಳದ್ದು.

ಶ್ರೀ ಎಸ್. ಬಂಗಾರಪ್ಪ.—ಹಾಗಾಗುವುದಿಲ್ಲ, ಅದರ ಹೊಣೆಗಾರಿಕೆ ಮೊದಲು ಸರ್ಕಾರದ್ದಾಗಿರುತ್ತದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನೂ ಸಹ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಅವರೂ ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಅದಕ್ಕೆ ಹೇಳಿದೆ. ಅಲ್ಲದೆ ಇದು ಸರ್ಕಾರದ ನೀತಿ. ಸರ್ಕಾರ ಯಾವ ಒಂದು ಸದುದ್ದೇಶದಿಂದ ತಾಳಿಭಾಗ್ಯ ಎನ್ನುವ ಯೋಜನೆ ಮಾಡಿತು. ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಇದರಲ್ಲಿ ಏನು ತಪ್ಪು ಆದರೂ ಕೂಡ ಇದರ ನೈತಿಕ ಹೊಣೆಗಾರಿಕೆ ಸರ್ಕಾರದ ಮೇಲೆ ಬೀಳುವುದರಿಂದ ಆ ತಪ್ಪನ್ನು ನೀವೇ ವಹಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿ ಈ ವಿಚಾರವನ್ನು ನಾನು ಇಷ್ಟಕ್ಕೇ ನಿಲ್ಲಿಸಿಬಿಡುತ್ತೇನೆ.

ಇನ್ನು ಜನತಾ ವಸತಿ ಕಾರ್ಯಕ್ರಮದ ಬಗ್ಗೆ ಹೇಳಬೇಕಾದರೆ ಬಡವರಿಗೆ ನಿವೇಶನಗಳನ್ನು ಕಟ್ಟಿಕೊಡತಕ್ಕಂಥ ವಿಚಾರದಲ್ಲಿ ವರ್ಷಕ್ಕೆ ಒಂದು ಲಕ್ಷ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಅಲ್ಲದೆ ಬಡವರಿಗೆ ನಿವೇಶನಗಳನ್ನು ನೀಡುವ ಬಗ್ಗೆ ನಿಮ್ಮ ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಾಗಲಿ ನಗರಗಳಲ್ಲಾಗಲಿ ನೋಡಿದರೆ ಈ ಕಾರ್ಯಕ್ರಮಗಳನ್ನು ಯಾವ ರೀತಿಯಾಗಿ ಸಮಾಧಿ ಮಾಡಿದ್ದೀರೋ ಅದೇ ರೀತಿಯಾಗಿ ಮನೆಗಳನ್ನು ಬಡವರಿಗೆ ಕಟ್ಟಿಸಿಕೊಡತಕ್ಕಂಥ ವಿಚಾರದಲ್ಲಿ ಕೂಡ ಹಾಳು ಮಾಡಿದ್ದೀರಿ. ಹಿಂದಿನ ಸರ್ಕಾರ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಇದ್ದಾಗ ನಾವು ಇದ್ದಾಗ ಒಂದು ತಾಲ್ಲೂಕಿಗೆ ೭೦೦-೮೦೦ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೆವು. ಕೊನೆ ಕೊನೆಗೆ ಅದು ಒಂದು ಸಾವಿರಕ್ಕೂ ಬಂದು ಮುಟ್ಟಿತ್ತು. ಇವೊತ್ತು ಇನ್ನೂ ಸಾವಿರಾರು ಮನೆಗಳನ್ನು ನಾವು ಕಟ್ಟಿಸಿಕೊಡಬೇಕಾಗಿದೆ, ಅಷ್ಟು ಒತ್ತಡ ಇದೆ. ತಾಲ್ಲೂಕು ಬೋರ್ಡ್‌ನಲ್ಲಿ ಈ ಮನೆಗಳ ಅಂಕಿಸಂಖ್ಯೆ ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಪ್ರತಿ ತಾಲ್ಲೂಕಿನಲ್ಲೂ ೧೮೦-೧೫೦-೨೦೦ ಮನೆಗಳು ಆಗಿರಬಹುದು, ಮ್ಯಾಕ್ಸಿಮಂ ೨೫೦ರ ಮೇಲೆ ಹೋಗಿಲ್ಲ. ಅದಕ್ಕೂ ಕೂಡ ಇನ್ನೂ ಫಸ್ಟ್ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ. ಅದಕ್ಕೆ ಪೂರ್ತಿ ಹಣ ಬಿಡುಗಡೆಯಾಗಿಲ್ಲ. ನಮ್ಮ ತಾಲ್ಲೂಕಿನಲ್ಲೇ ಮನೆಗಳನ್ನು ಕಟ್ಟಿ, ಆದಕ್ಕೆ ಅವರು ಬಿಲ್ ಮಾಡಿಕೊಟ್ಟಿದ್ದರೂ ಕೂಡ ಹಣ ಇಲ್ಲ ಎಂದು ಕೊಟ್ಟಿಲ್ಲ, ಏತಕ್ಕೆಂದರೆ ಖಜಾನೆಯಲ್ಲಿ ಹಣ ಇಲ್ಲ, ಮುಗಿದುಹೋಗಿದೆ, ಇವೊತ್ತು ಸಮಾಜದಲ್ಲಿರತಕ್ಕಂಥ ಇಂಥ ಬಡಜನರ ಪರಿಸ್ಥಿತಿಯ ಬಗ್ಗೆ ತಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೋ ಅದಕ್ಕೆಲ್ಲಾ ಹಣ ಇಲ್ಲದೇ ಅವುಗಳನ್ನು ಕೈಬಿಡತಕ್ಕಂಥ ಸನ್ನಿವೇಶ ಉಂಟಾಗಬಹುದು ಎನ್ನುವುದಕ್ಕೆ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಇನ್ನು ನಮ್ಮ ರಾಜ್ಯದ ಒಣ ಬೇಸಾಯದ ಬಗ್ಗೆ ಹೇಳಬೇಕಾದರೆ ಇದಕ್ಕೆ ನಮ್ಮ ಪಕ್ಷವೂ ಕೂಡ ಬೆಂಬಲ ಕೊಟ್ಟಿದೆ. ಇದರಲ್ಲಿ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ನಿಮ್ಮವರಿಗೇ ಆ ಸ್ಥಾನ ಕೊಟ್ಟಿದ್ದೀರಿ. ಇದರಲ್ಲಿ ಕೇಂದ್ರ ಸರ್ಕಾರದ್ದು ಎಷ್ಟು ಹಣ ಇದೆ, ರಾಜ್ಯ ಸರ್ಕಾರದ್ದು ಎಷ್ಟು ಹಣ ಇದೆ ಅದನ್ನು ಈ ಸದನದ ಮುಂದೆ ಇಡಿ. ಇದರಲ್ಲಿ ಆರ್‌ಎಲ್‌ಇಜಿಪಿ, ಡಿಪಿಎಪಿ ಹಣವೂ ಸೇರಿರುತ್ತದೆ ಒಣ ಬೇಸಾಯವನ್ನು ಬಲಪಡಿಸಲು ಒಣಬೇಸಾಯ ಅಭಿವೃದ್ಧಿ ಮಂಡಲಿ ಎಂದು ರಚಿಸಿದ್ದು ಆ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾದರೆ ಸಪೋರ್ಟಿಂಗ್ ಸ್ಟಾಫ್ ಬೇಕು. ಆಫೀಸರ್ಸ್ ಇದರ ಬಗ್ಗೆ ಬರೆಯುತ್ತಾರೆ. ಆ ಫೈಲನ್ನು ಈ ಸದನದ ಮುಂದೆ ಇಡಿ ಗೊತ್ತಾಗುತ್ತದೆ, ಆದಕ್ಕೆ ಸಿಬ್ಬಂದಿಯನ್ನು ನೇಮಿಸಿಕೊಂಡರೆ ಅವರಿಗೆ ಸಂಬಳ ಕೊಡುವುದಕ್ಕೆ ನಿಮ್ಮ ಹತ್ತಿರ ಹಣ ಇಲ್ಲ, ಅದಕ್ಕೆ ನೀವು ಸ್ಟಾಫನ್ನು ಸ್ಯಾಂಕ್ಷನ್ ಮಾಡುಂತಿಲ್ಲ ಇಲ್ಲ. ಅಲ್ಲಿ ಸರಿಯಾದ ಸಿಬ್ಬಂದಿ ಇಲ್ಲದೇ ಇರುವುದರಿಂದ ಅಲ್ಲಿ ಅವರು ಏನೂ ಕೆಲಸ ಕೆಲಸ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಇಲಾಖೆಗಳಿಗೂ ಖರ್ಚು ಮಾಡಬಾರದೆಂದು ತಾವು ತಿಳಿಸಿದ್ದೀರಿ. ಹೀಗಾದರೆ ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ಗೆ ಹಣ ಖರ್ಚು ಮಾಡಬೇಕಾಗಿದೆ ಎನ್ನುವ ಮಾತು ಯಾವ ರೀತಿಯಾಗಿರುತ್ತದೆ ಎಂದರೆ, ಹಣ ಡ್ರೈ ಆಗಿಯೇ ಇರುತ್ತದೆ, ಲ್ಯಾಂಡ್ ಮಾತ್ರ ಹಾಗೆಯೇ ಇರುತ್ತದೆ, ಈ ಬರಗಾಲದ ಸನ್ನಿವೇಶದಲ್ಲಿ ವಿಶ್ವ

ಕನ್ನಡ ಸಮ್ಮೇಳನಕ್ಕೆ ಯಾವ ರೀತಿಯಾಗಿ ಹಣ ಖರ್ಚು ಮಾಡಿದ್ದೀರೋ ಈ ರೀತಿಯಾಗಿ ಇದಕ್ಕೂ ಖರ್ಚು ಮಾಡಬೇಕಿತ್ತು. ಈ ವಿಷಯವನ್ನು ನಾನು ಇಷ್ಟಕ್ಕೇ ನಿಲ್ಲಿಸುತ್ತೇನೆ.

ಇನ್ನೊಂದು ವಿಷಯ ಏನೆಂದರೆ ನಿನ್ನೆಯ ದಿವಸ ಸೆಕ್ರೆಟೇರಿಯೇಟ್ ಎಂಪ್ಲಾಯಿಸ್‌ನವರಿಗೆ ಶ್ರೀ ರಾಮಕೃಷ್ಣ ಹೆಗಡೆಯವರು ವಿಧಾನಸೌಧದಲ್ಲಿ ಒಂದು ಸತ್ಕಾರಕೂಟವನ್ನೂ ಸಹ ಏರ್ಪಡಿಸಿದ್ದರು. ಅದರ ಬಗ್ಗೆ ಆ ಸಂಘದವರ ಒಂದು ಪಾಂಫ್ಲೆಟ್ಟು ಕೂಡ ನನ್ನ ಹತ್ತಿರ ಇದೆ. ಕರ್ನಾಟಕ ಸರ್ಕಾರದ ಸಚಿವಾಲಯ ನೌಕರರ ಸಂಘ, ವಿಧಾನ ಸೌಧ ಬೆಂಗಳೂರು. ಇದರಲ್ಲಿ ಈ ರೀತಿ ಹೇಳಿದ್ದಾರೆ. ಈ ದಿನ ಸಂಜೆ ೨೭-೧-೧೯೮೬ ರಂದು ಮಾನ್ಯ ಮುಖ್ಯಮಂತ್ರಿಗಳು ಸೆಕ್ರಿಟೇರಿಯೇಟ್ ಎಂಪ್ಲಾಯಿಸ್‌ಗೆ ಏರ್ಪಡಿಸಿರುವ ಸತ್ಕಾರ ಕೂಟಕ್ಕೆ ಒಂದು ನಿರ್ಬಂಧ ಹಾಕಿ ಅದರಲ್ಲಿ ಯಾವ ನೌಕರರೂ ಕೂಡ ಹೋಗ ಬಾರದು ಎಂದು ಹೇಳಿ ಆ ಸತ್ಕಾರಕೂಟವನ್ನು ಬಹಿಷ್ಕರಿಸಿದ್ದಾರೆ ಆ ಸತ್ಕಾರ ಕೂಟದಲ್ಲಿ ಬೇರೆ ಬೇರೆ ಜನ ಇದ್ದರು ಎಂದು ನನಗೆ ಅವರು ತಿಳಿಸಿದರು ತಮಗೆಲ್ಲಾ ಗೊತ್ತಿರುವ ವಿಷಯ. ಸೆಕ್ರೆಟೇರಿಯೇಟ್ ಎಂಪ್ಲಾಯೀಸ್ ಎಷ್ಟು ಜನ ಇದ್ದಾರೆ, ಅವರಿಗೆ ಏನು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು. ಅವರ ಸಮಾರಂಭಕ್ಕೆ ಕೊಟ್ಟಂಥಾ ಹಣ ಯಾವುದು ಎಂದರೆ ಇವೊತ್ತು ಈ ನೌಕರರು ಒಂದು ದಿನದ ಸಂಬಳವನ್ನು ಬರಗಾಲದ ಹಣಕ್ಕೆ ಕೊಡಬೇಕು ಎಂದು ಏನು ಹೇಳಿದ್ದಾರೆ. ಆ ನೌಕರರ ಹಣ ಈ ಸಮಾರಂಭಕ್ಕೆ ಸಂಪೂರ್ಣವಾಗಿ ಕೊಟ್ಟ ಹಾಗಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಬರಗಾಲದ ಉದ್ದೇಶಕ್ಕೆಂದು ತೆಗೆದುಕೊಂಡಂಥಾ ಹಣವನ್ನು ಈ ತರಹ ಸತ್ಕಾರ ಕೂಟಕ್ಕೆ ಖರ್ಚು ಮಾಡಿದರೆ ಇದು ಸರಿಯೇ ? ಮುಖ್ಯಮಂತ್ರಿಗಳ ಬರಗಾಲ ಪರಿಹಾರ ನಿಧಿಗೆ ನಮ್ಮ ಲೆಜಿಸ್ಲೇಚರ್ ಪಾರ್ಟಿಯಿಂದಲೂ ಕೊಟ್ಟಿದ್ದೇವೆ ನಿಮ್ಮನ್ನು ನೋಡಿ ಅಲ್ಲ ಜನ ನೋಡಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರನ್ನು ನೋಡಿ ಅಲ್ಲ ಜನಸಾಮಾನ್ಯರ ಕಷ್ಟವನ್ನು ನೋಡಿ ಹಣ ಕೊಟ್ಟಿದ್ದೇವೆ. ನೌಕರರು ಸಂಘ ಸಂಸ್ಥೆಯವರು, ಖಾಸಗಿ ಯವರು ಎಲ್ಲರೂ ಕೊಟ್ಟಿದ್ದಾರೆ ಹೀಗಿರುವಾಗ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಯಾವ ಉದ್ದೇಶಕ್ಕೆ ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅದಕ್ಕೆ ಮಾಡದೇ ಬರಗಾಲಕ್ಕೆಂದು ಹಣ ಕೇಳಿ, ಅದನ್ನು ಸತ್ಕಾರ ಕೂಟಕ್ಕೆ ಏರ್ಪಡಿಸಿಕೊಳ್ಳುವುದಾಗಲಿ ಮಾಡಿದರೆ ಇದರಲ್ಲಿಯೂ ರಾಜಕಾರಣ ನಡೆಸಿದರು ಎನ್ನುವ ಮಾತು ಬರುತ್ತದೆ. ಹಾಗಾದರೆ ಸರ್ಕಾರ ಇದರ ಬಗ್ಗೆ ಸಾಧಿಸಿದ್ದೇನು ? ಏತಕ್ಕೆ ಹೀಗೆ ಮಾಡುತ್ತಿದ್ದಾರೆ ? ಹಣ ಇಲ್ಲ, ಹಣ ಇಲ್ಲ ಎಂದು ಮಾತನಾಡತಕ್ಕಂಥವರು ಇಂಥಾದ್ದನ್ನು ಏತಕ್ಕೆ ಮಾತನಾಡಬೇಕು ?

ಇನ್ನೊಂದು ವಿಷಯ ಏನೆಂದರೆ ನನಗೆ ಜಯಪ್ರಕಾಶ ನಾರಾಯಣರವರ ಬಗ್ಗೆ ಅಪಾರ ಗೌರವ ಇದೆ ಅವರು ದೊಡ್ಡ ಹೋರಾಟಗಾರರಾಗಿದ್ದರು. ಉತ್ತರ ಪ್ರದೇಶದಲ್ಲಿ. ಬಲಿಯಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಹುಟ್ಟಿದಂತ ಊರು ಇರಬಹುದು ಅಲ್ಲಿ ಜಯಪ್ರಕಾಶ ನಾರಾಯಣ್‌ರವರ ಒಂದು ದತ್ತಿಗೆ ೨೫ ಲಕ್ಷ ರೂಪಾಯಿಗಳನ್ನು ಕೊಡತಕ್ಕಂಥಾ ವ್ಯವಸ್ಥೆಯನ್ನು ಇವರು ಮಾಡಿದರು. ಅದನ್ನು ಖಜಾನೆ ಹಣದಿಂದಲೇ ಕೊಟ್ಟಿದ್ದಾರೆ, ಅದು ರಾಜ್ಯ ಸರ್ಕಾರದ ಹಣ. ಅವರು ಬೆಂಗಳೂರಿಗೆ ಬಂದಮೇಲೆ ಪತ್ರಿಕಾ ವರದಿಗಾರರು ಈ ಬಗ್ಗೆ ಒಂದು ಪ್ರಶ್ನೆ ಹಾಕಿದರು.

> "When the State is reeling under severe drought is it prudent to announce donation of Rs. 25 lakhs to J P. Memorial Trust. The Congress (I) CPI and other parties have criticised you for making general donation".

ಎನ್ನತಕ್ಕ ಮಾತನ್ನು ಹೇಳಿದ್ದಾರೆ ಅದಕ್ಕೆ ಉತ್ತರವಾಗಿ ಏನು ಹೇಳಿದ್ದಾರೆ. Answer: There is absolutely notoing wrong in giving Rs. 25 lakhs to J. P. Memorial. Sri Jayaprakash Narayan was next to Mahatma Gandhi–he brought second freedom ಅವರು ತ್ಯಾಗ ಮಾಡಿದ್ದರ ಬಗ್ಗೆ ನಾವು ಪ್ರಶ್ನೆ ಮಾಡುವುದಿಲ್ಲ. ಕೇಳಿದ ಪ್ರಶ್ನೆಗೆ ಈ ರೀತಿ ಉತ್ತರ ಕೊಟ್ಟಿದ್ದಾರೆ. You critics have no two opinions about greatness of Jayaparakash Narayan what they have opposed was wether the State was in a position to give such a huge amount as donation. The amount would have been used for drought relief.

ಎಂದು ಕೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಈ ರೀತಿ ಇದೆ. ೨೫ ಲಕ್ಷ ರೂಪಾಯಿಗಳು ಮಾನ್ಯ ಮುಖ್ಯ ಮಂತ್ರಿಗಳ ಪ್ರಕಾರ ಜುಜುಬಿ ಹಣ. Answerings the question the Chief Minister said. What we need is crores for tackling the drought Besides, the donation will not be given right now, not in lumpsum. It will be given in three instalments. J. P. never soughtfor power life. ಉಳಿದಿರತಕ್ಕ ವಿಚಾರದ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ಆಗ ಅವರು ಅವರ ಮುಖಂಡರುಗಳು ಕೂಡ ಆಗಿರಲಿಲ್ಲ. ಉಳಿದಿರತಕ್ಕಂಥ ವಿಚಾರದ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ಜೆ. ಪಿ ಯವರು ಅವರ ಮುಖಂಡರುಗಳು ಕೂಡ ಆಗಿರಲಿಲ್ಲ. ಆದರೆ, ೨೫ ಲಕ್ಷ ರೂಪಾಯಿಗಳು ಮುಖ್ಯ ಮಂತ್ರಿಗಳ ಫಂಡಿನಿಂದ ಕೊಟ್ಟಿರುವುದು ಜುಜಿಬಿ ಹಣವೆಂದು ತಿಳಿದುಕೊಂಡಿದ್ದಾರೆ. ಇವತ್ತು ಮಾನ್ಯ ಮುಖ್ಯ ಮಂತ್ರಿಯವರು, ಕರ್ನಾಟಕ ಜನತೆಗೆ ಅಪೀಲು ಮಾಡಿ, ಹನಿಗೂಡಿದರೆ ಹಳ್ಳ ಎಂದು ದುಡ್ಡು ಶೇಖರಿಸುವುದಕ್ಕೆ ಹೊರಟಿದ್ದಾರೆ. ಸಾರ್ವಜನಿಕರ ಹಣವನ್ನು ಹ್ಯಾಂಡಲ್ ಮಾಡತಕ್ಕ ವಿಚಾರದಲ್ಲಿ ಬೇಜವಾಬ್ದಾರಿಯಿಂದ ವರ್ತಿಸದೆ ಬರಗಾಲದ ಬಗ್ಗೆ ಕಾಳಜಿ ಇಲ್ಲ ಎಂದು ಹೇಳತಕ್ಕ, ಕುತಂತ್ರದಲ್ಲಿ ಇದು ಪರ್ಯಾವಸನವಾಗಿದೆ ಎನ್ನುವ ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬಡವರಿಗೆ ಧೋತಿ, ಸೀರೆ, ಕುಪ್ಪಸ ಕೊಡತಕ್ಕ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕರ್ನಾಟಕ ಕೈ ಮಗ್ಗ ನಿಗಮದವರು ಸರಬರಾಜು ಮಾಡುವಂಥ ಬಟ್ಟೆಗಳ ಶ್ಯಾಂಪಲ್‌ನ್ನು ನಮಗೆ ಕಳುಹಿಸಿದ್ದಾರೆ. ಅದನ್ನು ನೋಡಿದರೆ ಎಂತಹವರೂ ತಲೆತಗ್ಗಿಸಬೇಕಾಗಿದೆ. ಸಮಾಜದಲ್ಲಿರತಕ್ಕ, ಬಡತನದಲ್ಲಿರತಕ್ಕ ಗಂಡು ಹೆಣ್ಣು ಮಕ್ಕಳು ತಮ್ಮ ಮೈ ಮುಚ್ಚಿಕೊಳ್ಳಲು ಬಟ್ಟೆ ಹಾಕಿಕೊಳ್ಳುತ್ತಾರೆ. ಆದರೆ, ತಾವು ಏನು ಬಟ್ಟೆಗಳನ್ನು ಕೊಡುತ್ತಿದ್ದೀರಿ, ಆ ಬಟ್ಟೆಯಲ್ಲಿ ಮೈ ಮುಚ್ಚಿಕೊಳ್ಳುವುದಕ್ಕೆ ಆಗುತ್ತದೆಯೆ ? ಚುನಾವಣೆಗೆ ಮೊದಲು ಬಟ್ಟೆ ಮತ್ತು ಅಕ್ಕಿಯನ್ನು ಕರ್ನಾಟಕ ದಾದ್ಯಂತ ಕೊಡುತ್ತೇವೆಂದು ತಿಳಿಸಿದಿರಿ, ನಂತರ ಪಟ್ಟಣ ಪ್ರದೇಶಗಳಲ್ಲಿರುವವರಿಗೆ ಕೊಡುವುದಿಲ್ಲವೆಂದು ಹೇಳಿದಿರಿ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಒಂದೊಂದು ರೀತಿಯಲ್ಲಿ ಹೇಳಿಕೆಕೊಟ್ಟು, ಕೊನೆಗೆ ಅದನ್ನು ಜಾರಿಗೆ ತರುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದೀರಿ. ನಾನು ಸೀರೆಯನ್ನೇ ತಂದು ಪ್ರದರ್ಶನ ಮಾಡಬೇಕೆಂದು ಇದ್ದೆ ಅದು ಚನ್ನಾಗಿರುವುದಿಲ್ಲವೆಂದು ತರಲಿಲ್ಲ. ತಾವು ಕೊಟ್ಟಿರತಕ್ಕ ಬಟ್ಟೆಗಳನ್ನು ನೀರಿಗೆ ಹಾಕಿದರೆ, ಮೀನು ಹಿಡಿಯುತಕ್ಕ ಬಲೆ ಆದ ಹಾಗೆ ಆಗುತ್ತವೆ. ಇಂಥ ಬಟ್ಟೆಗಳನ್ನು ನಮ್ಮ ಮನೆಯ ಹೆಣ್ಣು ಮಕ್ಕಳ ಮೈ ಮೇಲೆ ಹಾಕಿದರೆ ಏನಾಗುತ್ತದೆ ಎನ್ನುವ ಪ್ರಾಥಮಿಕ ಪ್ರಜ್ಞೆ ಕೂಡ ನಿಮಗೆ ಬರದೇ ಇದ್ದರೆ ಹೇಗೆ ? ಮಲೆನಾಡಿನ ಕಡೆ ಅರ್ಧ ಅರ್ಧ ಬಟ್ಟೆಯನ್ನು ಉಟ್ಟುಕೊಳ್ಳುತ್ತಾರೆ ಅದಕ್ಕಿಂತ ಕೀಳು ದರ್ಜೆ ಬಟ್ಟೆಯನ್ನು ಕೊಟ್ಟಿದ್ದೀರಿ ಇಂಥ ಜನತಾ ಪಕ್ಷದ ಬಟ್ಟೆಯನ್ನು ಹಾಕಿಕೊಂಡು ಬಡವರು ರಸ್ತೆ ಮೇಲೆ ಹೊರಟರೆ ಮನೆ ತಲುಪುವುದಕ್ಕೆ ಕಷ್ಟವಾಗುತ್ತದೆ. ಇಂಥ ಬಟ್ಟೆಯನ್ನು ಸದಸ್ಯರುಗಳಿಗೆ ಕಳುಹಿಸಿಕೊಟ್ಟರೆ ಅವರು ಯಾವ ರೀತಿ ಭಾಷಣ ಮಾಡುತ್ತಾರೆಂಬ ಪ್ರಾಥಮಿಕ ಪ್ರಜ್ಞೆ ಕೂಡ ನಿಮಗೆ ಇಲ್ಲ

ಶ್ರೀ ವೀರಣ್ಣ.—ಹಳ್ಳಿಯಲ್ಲಿ ಬಟ್ಟೆ ಉಟ್ಟುಕೊಂಡಿರುವವರನ್ನು ಕೇಳಿ.

ಶ್ರೀ ಎಸ್, ಬಂಗಾರಪ್ಪ.—ಮಹಾಸ್ವಾಮಿ, ವೀರಣ್ಣನವರೇ ನಮಗೆ ಗೊತ್ತಿದೆ. ಕೈ ಮಗ್ಗದ ನಿಗಮದವರು ಕಳುಹಿಸಿಕೊಟ್ಟಿದ್ದಾರೆ. ತಮಗೆ ಅದು ಬಂದಿಲ್ಲವೇನು ?

ಅಧ್ಯಕ್ಷರು.—ನನಗೆ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಎಲ್ಲರಿಗೂ ಬಂದಿದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಹಸಿರು ಕಾರ್ಡುಗಳನ್ನು ಸುಮಾರು ೨೫ ಲಕ್ಷ ಜನರಿಗೆ ಕೊಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಹೇಳಿದ್ದೀರಿ. ಬರಗಾಲ ಪ್ರದೇಶಗಳಲ್ಲಿ ಮತ್ತೆ ೪-೫ ಲಕ್ಷ ಹೆಚ್ಚು ಜನರಿಗೆ ಹಸಿರು ಕಾರ್ಡುಗಳನ್ನು ಕೊಡತಕ್ಕ ಕಾರ್ಯಕ್ರಮ ಕೂಡ ಹಾಕಿಕೊಳ್ಳಲಾಗಿದೆಯೆಂದು ತಿಳಿಸಿದ್ದೀರಿ. ಈ ಕಾರ್ಯಕ್ರಮದ ಮೇರೆಗೆ ಹಸಿರು ಕಾರ್ಡುಗಳನ್ನು ಜನತಾ ಪಕ್ಷದ ಬೆಂಬಲದವರಿಗೆ ಮಾತ್ರ ಆದ್ಯತೆ ಕೊಟ್ಟು ಅವ್ಯಾಹತವಾಗಿ ಹೆಚ್ಚಿನ ಭಾಗದಲ್ಲಿ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಬಂಗಾರಪ್ಪನವರು ಈ ಪುಸ್ತಕವನ್ನು ಸರಿಯಾಗಿ ಓದಿಲ್ಲ. ಸೀರೆ ಮತ್ತು ಧೋತಿಯನ್ನು ಕೊಡುತ್ತಿದ್ದೇವೆ, ಅದನ್ನು ನಿಲ್ಲಿಸುವುದಕ್ಕೆ ನಾವು ತಯಾರಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಹಸಿರು ಕಾರ್ಡು ಒಂದು ದೊಡ್ಡ ಹಗರಣವಾಗಿದೆ. ಸಾಮಾನ್ಯವಾಗಿ ಬರಗಾಲ ಜಾಸ್ತಿಯಾದಾಗ, ಬಡತನ ಜಾಸ್ತಿಯಾಗುತ್ತದೆ. ಈ ವರ್ಗದವರಿಗೆ ಪ್ರೀತಿ ವಿಶ್ವಾಸದಿಂದ ಈ ಹಸಿರು ಕಾರ್ಡನ್ನು ಕೊಡಲು ನೀವು ಕಾರ್ಯಕ್ರಮ ಮಾಡಬೇಕಾದೆ. ನಿಮ್ಮ ಯೋಜನೆಯ ಅಡಿಯಲ್ಲೇ ಈ ವಿಚಾರ ಉಳಿಯುತ್ತದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕಳೆದ ಚುನಾವಣೆಯಲ್ಲಿ ಜಯವಾಹಿನಿ ವಾಹನದಲ್ಲಿ ಪ್ರವಾಸ ಮಾಡಿದರು. ಆಗ ಅವರಿಗೆ ಓಟು ಬೇಕಾಗಿತ್ತು. ಆದರೆ ಈಗ, ಆ ಜಯವಾಹಿನಿ ಇಲ್ಲ, ಅದು ಎಲ್ಲಿದೆಯೋ ಗೊತ್ತಿಲ್ಲ. ಆಗ ಮತವನ್ನು ಸಂಗ್ರಹ ಮಾಡುವಾಗ ಎಷ್ಟೊಂದು ಕಳಕಳಿಯಿತ್ತು. ಈಗ ಏತಕ್ಕಿಲ್ಲ? ನಿಮ್ಮ ಕುತಂತ್ರ ಎಲ್ಲರಿಗೂ ಅರ್ಥವಾಗಿದೆ. ನಿಮ್ಮ ವಾಹನ ಈಗ ಪಾಸ್ಸಾಗಿದೆ. ನಿಮ್ಮ ವಾಹನ ಒಂದು ಕಡೆ, ನಿಮ್ಮ ಪ್ರಣಾಳಿಕೆ ಇನ್ನೊಂದು ಕಡೆ ಇದೆ. ನಿಮ್ಮ ವಾಹನ ಈಗ ಮೂಲಕ ವಾಹನವಾಗಿದೆ.

ಶ್ರೀ ಸಿ. ಬೈರೇಗೌಡ ಇತ್ತೀಚೆಗೆ ಪದವೀಧರರ ಕ್ಷೇತ್ರದ ಚುನಾವಣೆ ಬೆಂಗಳೂರು ಕೋಲಾರ ಸೇರಿಸಿಕೊಂಡು ನಡೆಯಿತು. ಅದರಲ್ಲಿ ಯಾರು ಯಾರು ಗೆದ್ದಿದ್ದಾರೆ, ಎಂಬುದು ನಿಮಗೆ ಗೊತ್ತಿರಬೇಕು, ಈ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯನ್ನು ನಿಲ್ಲಿಸತಕ್ಕ ಪ್ರಯತ್ನವನ್ನು ನೀವು ಮಾಡಲಿಲ್ಲ.

ಶ್ರೀ ಎಸ್. ಬಂಗಾರಪ್ಪ.–ಇದರ ಸಮಂಜಸನತೆಯನ್ನು ಈ ಸಭೆಯು ತೀರ್ಮಾನ ಮಾಡಬೇಕು. ಕರ್ನಾಟಕದಲ್ಲಿ ಪಿ ಎಲ್ ಡಿ ಬ್ಯಾಂಕುಗಳ ಚುನಾವಣೆಗಳು ನಡೆದವು. ಇದರಲ್ಲಿ ನಿಮ್ಮ ಪಕ್ಷದವರು ಕೆಲವರು ಗೆದಿದ್ದಾರೆ. ನಮ್ಮ ಕಡೆಯವರು ಕೆಲವರು ಗೆದ್ದಿದ್ದಾರೆ. ಕೆಲವು ಕಡೆ ನಾವು ಸೋತಿದ್ದೇವೆ ಕೆಲವು ಕಡೆ ನೀವು ಸೋತಿದ್ದೀರಿ. ಅದರ ಪ್ರಶ್ನೆ ಇದಲ್ಲ. ಈ ಸರ್ಕಾರದಲ್ಲಿ ಲಂಚದ ಹಾವಳಿ ಹೆಚ್ಚಾಗಿದೆ. ಎಲ್ಲಾ ಕಡೆ ಲಂಚಮಯವಾಗಿದೆ. ಹಿಂದೆ ಲಂಚ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನೀವು ಲಂಚ ರಹಿತ ಆಡಳಿತವನ್ನು ಕೊಡುತ್ತೇವೆಂದು ಧೈರ್ಯವಾಗಿ ನಿಮ್ಮ ಎದೆಯನ್ನು ಮುಟ್ಟಿಕೊಂಡು ಹೇಳಿ.

ಅಧ್ಯಕ್ಷರು.—ಲಂಚ ಇದೆಯೆಂಬುದನ್ನು ಆ ಕಡೆಯವರು ಈ ಕಡೆಯವರು ಎಲ್ಲರೂ ಒಪ್ಪುತ್ತಾರೆ. ಲಂಚ ನಿರ್ಮೂಲನ ಹೇಗೆ ಎಂಬುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ:—ನೀವು ಇಲ್ಲವೆಂದು ಹೇಳುತ್ತೀರಿ, ಆದರೆ ಅದನ್ನು ನಡೆಸುವುದನ್ನು ಬಿಟ್ಟಿಲ್ಲ.

ಶ್ರೀ ಜಿ. ನಾರಾಯಣ್ ಕುಮಾರ್.—ಲಂಚ ನಿರ್ಮೂಣ ಮಾಡಿದ್ದನ್ನು ನಾವು ನಿರ್ಮೂಲನ ಮಾಡುತ್ತಾ ಇದ್ದೇವೆ.

ಶ್ರೀ ಎಸ್.ಬಂಗಾರಪ್ಪ.—ಲಂಚವೊದಲು ಇರಲಿಲ್ಲ ಎಂಬುದು ಅಭಿಪ್ರಾಯವಲ್ಲ. ಸಮಾಜದಲ್ಲಿ ಮೊದಲಿನಿಂದಲೂ ಲಂಚ ಇದೆ. ಅವನ್ನು ತೆಗೆದುಹಾಕುವುದು ಹೇಗೆ ಎಂಬುದನ್ನು ಹಿಂದೆ ಹೇಳಿದ್ದೇವೆ. ಈ ದೇಶದಲ್ಲಿರತಕ್ಕ ಲಂಚವನ್ನು ನಿರ್ಮೂಲನ ಮಾಡಲು ಅಂಟಿ ಕರಪ್ಷನ್ ಇಲಾಖೆ ಇತ್ತು. ನಂತರ ವಿಜಿಲೆನ್ಸ್ ಕಮಿಷನ್ ಮಾಡಿದರು. ಈಗ ಮತ್ತೊಂದು ಎಂದರೆ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ ಎಂದು ಮಾಡಿದ್ದಾರೆ.

ಚುನಾವಣೆ ಕಾಲದಲ್ಲಿ ಸಮಾಜದಲ್ಲಿರತಕ್ಕ ಈ ಪಿಡುಗುಗಳನ್ನು ತೊಡೆದು ಹಾಕುವ ವಿಚಾರವನ್ನು ಎಲ್ಲಾ ರಾಜಕೀಯ ಪಕ್ಷಗಳು ಹೇಳುತ್ತವೆ. ಆದರೆ ಇವೊತ್ತು ಅಧಿಕಾರಕ್ಕೆ ಯಾವ ಪಕ್ಷ ಬರುತ್ತದೆ, ಆ ಪಕ್ಷ ಈ ಜವಾಬ್ದಾರಿಯನ್ನು ಹೊತ್ತುಕೊಂಡು ಕೆಲಸ ಮಾಡಬೇಕಾಗುತ್ತದೆ. ಲಂಚ ನಿಲ್ಲಿಸುವುದು ಸುಲಭವಲ್ಲ. ಕಷ್ಟ ಇದೆ, ಇದನ್ನು ನಿಲ್ಲಿಸಲು ಒಂದು ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗುತ್ತದೆ. ಲಂಚವನ್ನು ಯಾರಿಂದ ನಿರೀಕ್ಷಣೆ ಮಾಡುತ್ತಾರೆ ಅಂಥವರಿಗೆ ಅಧಿಕಾರ ಏತಕ್ಕೆ ಕೊಡಬೇಕೆಂದು ಒಂದೊಂದು ಸಲ ನನಗನಿಸುತ್ತದೆ. ಅನಿವಾರ್ಯವಾಗಿ ಈ ಮಾತನ್ನು ಹೇಳಬೇಕಾಗಿದೆ. It is not easy to suggest to eradicate the entire corruption system

that is prevailing in our society. ನೀವು ಅಧಿಕಾರಕ್ಕೆ ಬಂದ ಮೇಲೆ ಲಂಚವನ್ನು ನಿಲ್ಲಿಸತಕ್ಕ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೀರಾ ಎಂಬುದು ಮುಖ್ಯವಾದ ಪ್ರಶ್ನೆ ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ನಿಮ್ಮಲ್ಲಿ ಪ್ರಾಮಾಣಿಕತನ ಇದ್ದರೆ, ಹಾಗೂ ಅದರಲ್ಲಿ ನಂಬಿಕೆ ಇದ್ದರೆ ನೀವು ಏತಕ್ಕೆ ಇವರ ಬಗ್ಗೆ ಇದರಲ್ಲಿ ತಿಳಿಸಿಲ್ಲ. ಲಂಚ ಸರ್ವವ್ಯಾಪ್ತವಾಗಿ ಈ ಕರ್ನಾಟಕದಲ್ಲಿ ಬೆಳೆದು ಬಂದಿದೆ. ಇನ್ನೂ ಬೆಳೆಯುತ್ತಾ ಹೋಗಬಹುದು ಇದಕ್ಕೆ ನಿಮಗೆ ಅಭ್ಯಂತರ ಇಲ್ಲ. ಇವಕ್ಕಾಗಿ ಜನ ನಿಮಗೆ ಮತವನು ಕೊಟ್ಟಿದ್ದರೋ? ಲಂಚ ಈ ಮಟ್ಟಕ್ಕೆ ಹೋದರೆ ನಿಮ್ಮ ನೈತಿಕ ಶಕ್ತಿ ಎಲ್ಲಿ ಉಳಿಯುತ್ತದೆ? ಹಿಂದೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಸಂಡೇ ಅಥವಾ ಸೂರ್ಯ ಮ್ಯಾಗಜೈನ್‌ನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು ಏನೆಂದರೆ "Scandal less Government in 1984" ಎಂದರೆ ಯಾವ ಹಗರಣಗಳೂ ಇಲ್ಲದ ಒಂದು ಸರ್ಕಾರ ಕರ್ನಾಟಕ ರಾಜ್ಯದಲ್ಲಿದೆಯೆಂದು ಆದರೆ ಇಲ್ಲಿ ಹಗರಣಗಳ ಸರಮಾಲೆಯೇ ಇದೆ. ಎಷ್ಟು ಜುಡಿಷಿಯಲ್ ವಿಚಾರಣೆ ಮಾಡಿಸಿದ್ದೀರಿ. ರೆಕ್ಟಿಫೈಡ್ ಸ್ಪಿರಿಟ್‌ನಲ್ಲಿ ರೂ, ೪೮,೭೮ 000 ಮತ್ತು ಗೋವಾ ಕಂಪನಿಯಿಂದ ಮೇಘಟೋವೆಲ್ ಮತ್ತು ಮಧ್ಯ ಪ್ರದೇಶ ಹಾಗೂ ಕೇರಳದ ಕಂಪನಿಗಳಿಗೆ ಮಾರಾಟ ಮಾಡಿರುವುದರ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ನಾನು ಮತ್ತೆ ಅವುಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೆ, ಸಾಮಾನ್ಯವಾಗಿ ವಿರೋಧಪಕ್ಷದ ನಾಯಕರು ಮಾತ ನಾಡುವಾಗ ಮಧ್ಯೆ ಪ್ರವೇಶ ಮಾಡುವುದು ಯೋಗ್ಯವಲ್ಲ. ಅದಕ್ಕೆ ಅವರಿಗೆ ಅನುಮತಿ ಕೇಳುತ್ತಿದ್ದೇವೆ ನಾನು ಅವರು ಭಾಷಣ ಮಾಡುತ್ತಾರೆಂದು ಬೇರೆ ಎಲ್ಲಾ ಮೀಟಿಂಗ್‌ಗಳನ್ನು ರದ್ದು ಮಾಡಿಕೊಂಡು ಬಂದು ಕುಳಿತಿದ್ದೇನೆ. ನಾನೂ ಸಹ ಅಲ್ಲಿ ಕುಳಿತು ಕೆಲಸಮಾಡಿದ್ದೇವೆ. ಲಂಚದ ಬಗ್ಗೆ ಪ್ರಸ್ತಾಪ ಮಾಡು ತ್ತಿದ್ದಾರೆ, ಒಂದು ವಿಷಯ ಹಿಂದೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದು ಕಮಿಷನ್ ಆಫ್ ಎನ್‌ಕ್ವಯಿರಿ ಮುಂದೆ ಇದೆ. ಅಲ್ಲಿಂದ, ಈಚೆಗೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಲಂಚದ ಬಗ್ಗೆ ಆರೋಪ ಮಾಡುವಾಗ ನೇರವಾಗಿ ಯಾವುದೇ ಮಂತ್ರಿ ಇರಲಿ. ಮುಖ್ಯಮಂತ್ರಿ ಇರಲಿ. ಅವರ ಮೇಲೆ ನಿರ್ದಿಷ್ಟ ಅಪಾದನೆ ಮಾಡದೇ ಇದ್ದರೆ ಅವರ ಮಾತಿಗೆ ಅಷ್ಟು ಪುಷ್ಟಿ ಸಿಕ್ಕಲಾರದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ ಏಕೆಂದರೆ, ಅದು ಜವಾಬ್ದಾರಿ ಸ್ಥಾನ. ನಾನು ಇನ್ನೂ ಒಂದು ಗಂಟೆ ಕಾಲ ಕುಳಿತುಕೊಳ್ಳಲಿಕ್ಕೆ ಸಿದ್ಧ ಇದ್ದೇನೆ. ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ ಈ ಸರ್ಕಾರದಲ್ಲಿರತಕ್ಕ ಯಾವುದೇ ಒಬ್ಬ ಮಂತ್ರಿಯ ಮೇಲಾಗಲಿ, ಅಥವಾ ಯಾವುದೇ ಒಂದು ಇಲಾಖೆಯ ಬಗ್ಗೆ ಆಗಲಿ ನಿರ್ದಿಷ್ಟವಾದ ಅಪಾದನೆ ಮಾಡಿದರೆ ಅದಕ್ಕೆ ಸಿದ್ಧ ಇದ್ದೇವೆ.

ಶ್ರೀ ಜಿ. ಮಾದೇಗೌಡ,—ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಲಂಚ ಇಲ್ಲವೇ ಇಲ್ಲ ಎಂದು ಆತ್ಮ ಸಾಕ್ಷಿಯಾಗಿ ಹೇಳಲಿ,

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಮಂತ್ರಿಗಳಾಗಿದ್ದವರು ದಯಮಾಡಿ ಕುಳಿತು ಕೊಳ್ಳಬೇಕು.

ಶ್ರೀ ಜಿ. ಮಾದೇಗೌಡ.—ನಮ್ಮ ನಾಯಕರು ಸಲಹೆ ಕೊಡುತ್ತಿದ್ದಾರೆ. ಅಧಿಕಾರ ಮಾಡ ತಕ್ಕವರು ನಿಷ್ಪಕ್ಷಪಾತವಾಗಿ, ಸತ್ಯವಾಗಿ ಆಡಳಿತ ಮಾಡಿದರೆ, ಕೆಳಗಡೆ ಇರತಕ್ಕವರು ಏನು ಲಂಚ ತೆಗೆದುಕೊಳ್ಳುತ್ತಿದ್ದಾರೆ ಅದರಲ್ಲಿ ೫೦ ಪರ್‌ಸೆಂಟ್ ಕಡಿಮೆಯಾಗುತ್ತದೆ. ಮೇಲ್ಗಡೆ ಭಕ್ಷಕರಾದರೆ, ಕೆಳಗಡೆ ಇರತಕ್ಕವರು ಭಕ್ಷಕರಾಗುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಆಡಳಿತದಲ್ಲಿ ಸಂಪೂರ್ಣವಾಗಿ ಲಂಚವನ್ನು ತೊಡೆದು ಹಾಕಿ ದ್ದೇವೆಂದು ನಾವು ಎಲ್ಲಿಯೂ ಘೋಷಣೆ ಮಾಡಿಲ್ಲ. ಈಗ ಅನೇಕ ಹಂತದಲ್ಲಿ ಲಂಚದ ಪಿಡುಗು ನಮ್ಮ ಸಮಾಜದಲ್ಲಿ ಅಂಟಿಕೊಂಡಿದೆ, ಇದನ್ನು ತೆಗೆದು ಹಾಕುವುದಕ್ಕೆ ಹಲವಾರು ಪ್ರಯತ್ನಗಳು ನಡೆದು ಕೊಂಡು ಬಂದಿದೆ. ಲೋಕಪಾಲ್ ಇದೆ, ಲೋಕಾಯುಕ್ತ ಮಾಡಿದ್ದೇವೆ. ಇಷ್ಟಕ್ಕೆ ನಮ್ಮ ಕರ್ತವ್ಯ ಮುಗಿದುಹೋಯಿತು ಎಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ. ಅಪಾದನೆ ಮಾಡುವಾಗ ತಾಲ್ಲೂಕು ಆಫೀಸಿನಲ್ಲಿ ಏನೋ ಕಮಿಷನ್ ತೆಗೆದುಕೊಂಡಿದ್ದರೆ ಅದರ ಬಗ್ಗೆ ವ್ಯಾಖ್ಯಾನ ಮಾಡಬೇಕಾಗಿಲ್ಲ, ಸಚಿವ ಸಂಪುಟದಲ್ಲಿರತಕ್ಕವರು ಯಾರೇ ಇರಲಿ ಅವರ ಮೇಲೆ ನೇರವಾಗಿ ಅಪಾದನೆ ಮಾಡಿದರೆ ಅದಕ್ಕೆ ಕ್ರಮ

ತೆಗೆದುಕೊಳ್ಳಬಹುದು, ಕೆಲವು ಕಡೆ ಸಂಪೂರ್ಣವಾಗಿ ಇವನ್ನು ತೊಡೆದುಹಾಕಿದ್ದೇವೆ, ಸರಿಪಡಿಸಲಿಕ್ಕೆ ಎಲ್ಲಾ ಪ್ರಯತ್ನ ಮಾಡಬೇಕಾಗುತ್ತದೆ. ದಯಮಾಡಿ ಅವರ ಬಗ್ಗೆ ನಿರ್ದಿಷ್ಟ ಆಪಾದನೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನನ್ನ ಭಾಷಣದ ಧಾಟಿಯನ್ನು ಮಾನ್ಯ ದೇವೇಗೌಡರು ಗ್ರಹಿಸಲಿಲ್ಲ ಎಂದು ಭಾವಿಸಿದ್ದೇನೆ. ಸ್ಕ್ಯಾಂಡಲ್ ಲೆಸ್ ಗವರ್ನ್‌ಮೆಂಟ್ ಎನ್ನತಕ್ಕ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಕ್ಕೋಸ್ಕರ ನಾನು ಈ ಸರ್ಕಾರ ಫುಲ್ ಆಫ್ ಸ್ಕ್ಯಾಂಡಲ್ಸ್ ಎನ್ನುವ ಮಾತನ್ನು ಹೇಳಿದೆ. ಸ್ಪಿರಿಟ್ ಎನ್‌ಕ್ವಯಿರಿ ಬಗ್ಗೆ ಚಿನ್ನಪ್ಪಣ್ಣನವರ ಅಪಾಯಿಂಟ್ ಆಗಿದೆ. ಈಗ ಇಂತಹ ಮಂತ್ರಿಗಳು ಲಂಚ ತಿಂದಿದ್ದಾರೆಂದು ಹೇಳತಕ್ಕ ವಿಚಾರ ಇಲ್ಲ. ಹಿಂದೆ ೨೪ನೇ ಡಿಸೆಂಬರ್ ೧೯೮೪ರಲ್ಲಿ ನಡೆದ ಲೋಕಸಭಾ ಎಲೆಕ್ಷನ್ ಸಂದರ್ಭದಲ್ಲಿ ೪೮ ಲಕ್ಷದ ೨೭ ಸಾವಿರ ಲೀಟರ್ ಸ್ಪಿರಿಟ್ ಮಾರಾಟ ಮಾಡಿದ ವಿಚಾರ ಬಂತು. ಅರೇಕ್ ಬಾಟ್ಲಿಂಗ್ ವಿಚಾರದ ಬಗ್ಗೆ ಹೈಕೋರ್ಟಿನಲ್ಲಿದೆ. ಸರ್ಕಾರ ಕಂಟ್ರಾಕ್ಟರ್ ಜೊತೆ ಶಾಮೀಲಾಗಿದ್ದಾರೆಂದು ಹೇಳಬೇಕಾಗುತ್ತದೆ, ನಿಮ್ಮ ಸರ್ಕಾರ ಇದ್ದಾಗ ಕಾನೂನು ಮಂತ್ರಿಗಳಾಗಿದ್ದವರನ್ನು ಕರೆಯಿಸಲಿಕ್ಕೆ ಪ್ರಯತ್ನ ನಡೆಯಿತು. ಅಂತೂ ಇದು ಹೈಕೋರ್ಟ್‌ನಲ್ಲಿ ಅಡ್ಮಿಟ್ ಆಗಿದೆ. ಇದು ಸರ್ಕಾರ ಮತ್ತು ಕಂಟ್ರಾಕ್ಟರ್ ಶಾಮೀಲಾಗಿ ನಡೆದಿರತಕ್ಕದ್ದು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬರದೇ ಯಾವುದೂ ಆಗುವುದಿಲ್ಲ. ಇಂತಹ ವಿಚಾರಗಳ ಸರಮಾಲೆಗಳು ಸಂಪೂರ್ಣವಾಗಿ ನಿಮ್ಮ ಕೊರಳಲ್ಲಿ ಇವೆ. ಇಂತಹ ಹಗರಣಗಳ ಸರಮಾಲೆಯನ್ನು ಹೊತ್ತಿರತಕ್ಕ ಸರ್ಕಾರ ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನು ಅಲ್ಪಸಂಖ್ಯಾತರ ನಿಗಮದ ಬಗ್ಗೆ ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಹಣ ಸಾಲದು ಎಂದು ಬಡ್ಜೆಟ್ ವಿಚಾರ ಬಂದಾಗ ಮಾತನಾಡೋಣ. ಇನ್ನು ಸೆಂಟ್ರಲ್ ಆರ್ಮ್ಡ್ ರಿಸರ್ವ್ ಪೋಲೀಸ್‌ನಲ್ಲಿ ಮುಸ್ಲಿಂ ಬಾಂಧವರು ಐದಾರು ಜನರು ಇದ್ದಾರೆಂದು ಕೇಳಿದ್ದೇನೆ. ಅವರ ಧರ್ಮದ ಪ್ರಕಾರ ಅವರು ನಡೆದುಕೊಳ್ಳಬೇಕಾಗುತ್ತದೆ. ಈ ಮುಸ್ಲಿಂ ಬಾಂಧವರು ಈ ಇಲಾಖೆಯಲ್ಲಿ ಸುಮಾರು ೧೫-೨೦ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಪೋಲೀಸ್ ಇಲಾಖೆಯ ಮ್ಯಾನ್ಯುಯಲ್ ಪ್ರಕಾರ ಗಡ್ಡ ಬೋಳಿಸಿಕೊಂಡು, ಕ್ಲೀನ್ ಆಗಿ ಷೇವ್ ಮಾಡಿಕೊಂಡು ಬರಬೇಕೆಂದು ಇದೆಯಂತೆ. ಇವೊತ್ತು ಸಿಕ್ಕರು ತಮ್ಮ ಧರ್ಮದ ಪ್ರಕಾರ ಪೇಟ ಇಟ್ಟುಕೊಂಡು ಇರುವುದಿಲ್ಲವೇ ? ಈಗ ಅಲ್ಲಿ ಏನು ಮಾಡಿದ್ದಾರೆಂದರೆ ಗಡ್ಡ ಬಿಟ್ಟುಕೊಂಡಿದ್ದವರನ್ನು ಸಸ್ಪೆಂಡ್ ಮಾಡಿದ್ದಾರೆ. ಸುಮಾರು ನಾಲ್ಕೈದು ಜನ ಪೋಲೀಸ್ ಇಲಾಖೆಗೆ ಸಂಬಂಧಪಟ್ಟವರು ಮುಖ್ಯಮಂತ್ರಿಗಳ ಬಳಿ ನಿಯೋಗ ಬಂದು ಹೇಳಿ ಹೋಗಿದ್ದಾರೆ.

ಶ್ರೀ ಬಿ. ರಾಚಯ್ಯ.—೧೯೮೦ನೇ ಇಸವಿಯಲ್ಲಿ ಪೋಲೀಸ್ ಮ್ಯಾನ್ಯುಯಲ್‌ನಲ್ಲಿ ತಿದ್ದುಪಡಿ ಮಾಡಿದಾಗ ನಾನು ಇರಲಿಲ್ಲ. ತಿದ್ದುಪಡಿ ಮಾಡಿದ ಮೇಲೆ ಅದಕ್ಕೆ ಹಿಂದೆ ಯಾರು ಗಡ್ಡ ಬಿಟ್ಟಿದ್ದವರು ಇದ್ದರು ಅವರನ್ನು ಸಸ್ಪೆಂಡ್ ಮಾಡಿದ್ದರೆ ಅದನ್ನು ರಿವೋಕ್ ಮಾಡುತ್ತೇನೆ. ಅದರ ಬಗ್ಗೆ ಅಲ್ಲಿಯೂ ಒಪ್ಪಿಕೊಂಡಿದ್ದೇನೆ. ಈಗ ರೂಲ್ಸ್ ಒಪ್ಪಿಕೊಂಡಮೇಲೆ ರೂಲ್ಸ್‌ಗೆ ಎಲ್ಲರೂ ಒಳಪಡಲೇಬೇಕಾಗುತ್ತದೆ ಅದನ್ನು ಬಿಟ್ಟು ನಾನು ಅಯ್ಯಪ್ಪಸ್ವಾಮಿಗೆ ಹೋಗುತ್ತೇನೆಂದು ಕಪ್ಪುಬಟ್ಟೆ ಹಾಕಿಕೊಂಡು ಬರುವುದು, ಅನಂತರ ನಾಮ ಹಾಕಿಕೊಂಡು ಬರುತ್ತೇನೆ ಎಂದು ಹೇಳುವುದು, ಅನಂತರ ಕಾವಿ ಬಟ್ಟೆ ಹಾಕಿಕೊಂಡು ಬರುತ್ತೇನೆ ಎಂದು ಹೇಳುವುದು ಈ ರೀತಿ ಆದರೆ ಬಹಳ ಕಷ್ಟವಾಗುತ್ತದೆ. ಅನಂತರ ದಿಗಂಬರರಾಗಿ ಬರುತ್ತೇವೆ ಎಂದರೆ ಹೇಗೆ ಮಾಡಲಿಕ್ಕೆ ಆಗುತ್ತದೆ. ಈಗ ರೂಲ್ಸ್ ಮಾಡಿರುವವರು ಅವರೇ, ಅವರು ಇಂಪ್ಲಿಮೆಂಟ್ ಮಾಡಲಿಲ್ಲ. ನಾವು ಇಂಪ್ಲಿಮೆಂಟ್ ಮಾಡಲಿಕ್ಕೆ ಹೋಗಿದ್ದೇವೆ. ಅವರು ರೆಗ್ಯುಲರ್ ಆಗಿ ಅಲ್ಲಿ ಇರಲಿಲ್ಲ. ಅವರು ಬೇರೆ ಕಡೆ ಡೆಪ್ಯುಟೇಷನ್ ಮೇಲೆ ಇದ್ದಗು ಎಂದು ಕಾಣುತ್ತದೆ. ಪೋಲೀಸ್ ಇಲಾಖೆಗೆ ಸೇರತಕ್ಕವರು ನಾವು ಗಡ್ಡ ಬಿಡುವುದಿಲ್ಲ ಎಂದು ನೋಡಿಕೊಂಡೇ ಬರುವುದು ಅವರು ಬಂದಮೇಲೆ ಶಿಸ್ತಿಗೆ ಒಳಪಡ ಬೇಕಾಗುತ್ತದೆ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಮಂತ್ರಿಗಳು ಅವರ ಇಲಾಖೆಯವರನ್ನು ಸಸ್ಪೆಂಡ್ ಮಾಡಿದ್ದಾರೆ. ವಿಚಾರ ನಮ್ಮ ಕಡೆಗೆ ಬಂತು.

ಅಧ್ಯಕ್ಷರು.—ನೀವು ಸಸ್ಪೆಂಡ್ ಮಾಡಿದಾಗ ಆ ವಿಚಾರ ಅವರ ಕಡೆಗೆ ಹೋಗುತ್ತದೆ, ಅವರು ಸಸ್ಪೆಂಡ್ ಮಾಡಿದಾಗ ವಿಚಾರ ನಿಮ್ಮ ಕಡೆಗೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ದಿಗಂಬರರು, ಅಯ್ಯಪ್ಪಸ್ವಾಮಿ ಭಕ್ತರು ಕಪ್ಪು ಬಟ್ಟೆ ಹಾಕುತ್ತಾರೆಂದು ಹೇಳಿದ್ದಾರೆ. ಖಾಕಿ ಬಟ್ಟೆಯನ್ನು ಅವರು ಕೂಡ ಹಾಕಿಕೊಂಡಿದ್ದಾರೆ, ಗಡ್ಡವನ್ನು ನೀವು ಕೊಟ್ಟಿದ್ದೀರೇನು ? ಗಡ್ಡ ಸ್ವಂತ ಅವರದು

ಶ್ರೀ ಬಿ. ರಾಚಯ್ಯ.—ಸಸ್ಪೆಂಡ್ ಮಾಡಿದ ಮೇಲೆ, ಸಾಬರೇ ಹೋಗಿರುವಾಗ ಇವರು ಗಡ್ಡ ಹಿಡಿದುಕೊಂಡು ಕುಳಿತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಧರ್ಮದ ಪ್ರಕಾರ ಅವರು ಗಡ್ಡ ಬಿಟ್ಟಿದ್ದಾರೆ. ದಿಗಂಬರರನ್ನಾಗಿ ಮಾಡುವ ಹಾಗೆ ಇದ್ದರೆ ಇವರ ಕಾಲದಲ್ಲಿ ಅದು ನಡೆಯಲಿ. ಡಾ॥ ಸರೋಜಿನಿ ಮಹಿಷಿ ಕಮಿಟಿ ವಿಚಾರವಾಗಿ ಹೇಳುವುದಾದರೆ ಆ ಕಮಿಟಿಯನ್ನು ಕನ್ನಡಿಗರಿಗೆ ಖಾಸಗಿ ಕಾರ್ಖಾನೆಗಳಲ್ಲಿ ಮಂತ್ರಿ ಕಚೇರಿಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಬೇಕೆಂದು ಪ್ರಾತಿನಿಧ್ಯ ಕೊಟ್ಟು ರಚಿಸಲಾಗಿದೆ. ಈ ಕಾರ್ಖಾನೆಗಳಿಗೆ ಸರ್ಕಾರದವರು ನೀರು, ವಿದ್ಯುಚ್ಛಕ್ತಿ ಇನ್ನಿತರ ಅನೇಕ ಸೌಲಭ್ಯಗಳನ್ನು ಕೊಡುತ್ತಾರೆ. ಆ ರೀತಿ ಸೌಲಭ್ಯಗಳನ್ನು ಸರ್ಕಾರ ಕೊಟ್ಟಾಗ ಕನ್ನಡಿಗರಿಗೆ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಡುವುದಕ್ಕಾಗಿ ಡಾ॥ ಸರೋಜಿನಿ ಮಹಿಷಿಯವರ ಕಮಿಟಿಯನ್ನು ರಚಿಸಲಾಗಿದೆ. ಅವರ ಕಛೇರಿ ನನ್ನ ಕಛೇರಿಯ ಪಕ್ಕದಲ್ಲಿಯೇ ಇದೆ. ಆ ಕಮಿಟಿಯನ್ನು ಎಷ್ಟು ದಿವಸ ಇಟ್ಟು ಕೊಳ್ಳುತ್ತೀರಿ ? ಕಮಿಟಿ ರಿಪೋರ್ಟ್ ಕೊಟ್ಟು ಎಷ್ಟು ದಿವಸಗಳಾಯಿತು ? ಅವರ ಪರಿಸ್ಥಿತಿ ಏನಾಯಿತು ? ಅದೇ ರೀತಿ ಗಂಗಾರಾಮ್ ಕಟ್ಟಡ ಅದರ ಬಗ್ಗೆ ರಿಪೋರ್ಟ್ ಕೊಟ್ಟು ಎಷ್ಟು ದಿವಸ ಆಯಿತು ? ರಿಪೋರ್ಟ್ ಕೊಟ್ಟು ಐದಾರು ತಿಂಗಳುಗಳಾಗಿವೆ ಅದರ ಬಗ್ಗೆ ಇವತ್ತು ಏನು ಮಾಡಿದ್ದೀರಿ ? ಯಾರು ಯಾರು ಅಧಿಕಾರಿಗಳು ಇದ್ದಾರೆ ಅವರುಗಳನ್ನು ಬಿಟ್ಟು ಉಳಿದವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ನಾವು ಸದನದಿಂದ ಹೊರಗಡೆ ಹೋದಾಗ ಆ ವರದಿಯನ್ನು ಸಭೆಯ ಮುಂದೆ ಇಟ್ಟಿದ್ದೀರಿ, ಆಯೋಗ ಯಾರು ತಪ್ಪಿತಸ್ಥರು ಎಂದು ವರದಿ ಕೊಟ್ಟಿದೆ ಅದರ ಪ್ರಕಾರ ಅಂಥವರುಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಇಲ್ಲಿ ರಾಜಕೀಯ ಒತ್ತಡ ತರುವುದು ಬೇಡ. ಡಾ॥ ಸರೋಜಿನಿ ಕಮಿಟಿ ವರದಿಯನ್ನು ಜಾರಿಗೆ ಕೊಡಿ. ಆ ಕಮಿಟಿಯ ಅಧ್ಯಕ್ಷರಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿದ್ದೀರಿ. ಅವರಿಗೆ ಕಾರು ಕೊಟ್ಟಿದ್ದೀರಿ, ರಾಜ್ಯ ಸಚಿವರ ಸ್ಥಾನಮಾನಗಳನ್ನು ಕೊಟ್ಟಿದ್ದೀರಿ. ಸ್ಟೇಟ್ ಮಿನಿಸ್ಟರ್ ಕೇಡರ್ ಏತಕ್ಕೆ ? ನಿಮ್ಮ ಪಕ್ಷದವರು ಎಂದು ಕೊಟ್ಟಿದ್ದೀರಾ ? ಆ ಕಮಿಟಿಯನ್ನು ಹಾಗೆಯೇ ಇಟ್ಟು. ಸರ್ಕಾರದ ಖಜಾನೆಯ ಸಾರ್ವಜನಿಕರ ಹಣವನ್ನು ಸಾವಿರಾರು ಲಕ್ಷಾಂತರ ರೂಪಾಯಿಗಳ ಹಣವನ್ನು ಲೂಟಿ ಮಾಡುವುದಕ್ಕೆ ನೀವು ಕಾರಣರಾಗಿದ್ದೀರಿ. ನಿಮಗೆ ಹೇಳುವವರು ಯಾರೂ ಇಲ್ಲ, ಇದು ಯಾಗ ಕಣ್ಣಿಗೂ ಬೀಳುವುದಿಲ್ಲವೆಂದು ಜನರ ಹಣವನ್ನು ಖರ್ಚು ಮಾಡುತ್ತೀರಿ. ಬರಗಾಲ ಪರಿಸ್ಥಿತಿ ಇರುವಾಗ ನೀವು ಖರ್ಚನ್ನು ಕಡಿಮೆ ಮಾಡಬೇಕಾಗಿತ್ತು. ಇವೊತ್ತು ಕಾನೂನುಬದ್ಧವಾಗಿ ಕಮಿಟಿಯನು ಇಟ್ಟಿದ್ದೀರಿ, ಅದರ ಅವಶ್ಯಕತೆ ಏನಿದೆ ? ಅದಕ್ಕಾಗಿ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಥಿಂಕ್ ಟ್ಯಾಂಕ್ ನಿಮ್ಮ ಚಿಂತನಚಿಲುಮೆ ಏನು ಮಾಡುತ್ತಿದೆ ? ರಾಜ್ಯಪಾಲರ ಭಾಷಣವನ್ನು ಓದಿದರೆ ಚಿಂತನ ಚಿಲುಮೆಯಲ್ಲಿರತಕ್ಕವರು ಆರಾಮವಾಗಿದ್ದಾರೆ. ಜನರ ಹಣ ೫ ರೂಪಾಯಿ ಆಗಲಿ, ೫ ಲಕ್ಷ ಆಗಲಿ, ೫೦ ಲಕ್ಷ ಆಗಲಿ ಅದು ಸಾರ್ವಜನಿಕ ಹಣ ಅದನ್ನು ನೀವು ಉಳಿಸಬೇಕು. ಚಿಂತನಚಿಲುಮೆಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದೀರಿ, ಏತಕ್ಕೆ ?

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಇದೇನು ಸ್ವಾಮಿ...

ಅಧ್ಯಕ್ಷರು.—ವಿರೋಧಪಕ್ಷದ ನಾಯಕರು ಸರ್ಕಾರದ ೧ ಪೈಸೆ ಖರ್ಚಿನ ಬಗ್ಗೆ ಕೂಡ ಮಾತನಾಡಬಹುದು ತಾವು ಕುಳಿತುಕೊಳ್ಳಿ,

ಶ್ರೀ ಎಸ್. ಬಂಗಾರಪ್ಪ.—ಡಾ॥ ಜೀವರಾಜ ಆಳ್ವರವರು ಬೆಲೆ ಏರಿಕೆಯ ಬಗ್ಗೆ ಒಂದು ಹೇಳಿಕೆಯನ್ನು ಪತ್ರಿಕೆಗಳಿಗೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಭೆಗೆ ಬಂದಿಲ್ಲ. ಡಾ॥ ಆಳ್ವರವರು ಅಥವಾ ಯಾವ ಮಂತ್ರಿಗಳೇ ಆಗಲಿ ಹೇಳಿಕೆಯನ್ನು ಕೊಡುವಾಗ ಜವಾಬ್ದಾರಿಯಿಂದ ಹೇಳಿಕೆಗಳನ್ನು ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಬೆಲೆ ಏರಿಕೆ ಮಾಡುವುದಕ್ಕೆ ಪ್ರಧಾನ ಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ. ಎನ್ನುವ ಹೇಳಿಕೆ ಪತ್ರಿಕೆಗಳಲ್ಲಿ ಬಂದಿದೆ ಯಾವಾಗ ಕೊಟ್ಟಿದ್ದಾರೆ ? ಇವರು ಪ್ರಧಾನ ಮಂತ್ರಿಗಳನ್ನು ದೆಹಲಿಯಲ್ಲಿ ಭೇಟಿ ಮಾಡಿ ಮಾತು ಕತೆ ನಡೆಸಿದ್ದಾರೆಯೇ ? ಬೆಲೆ ಏರಿಕೆ ಮಾಡುವುದಕ್ಕೆ ಪ್ರಧಾನಮಂತ್ರಿಗಳು ರಾಮಕೃಷ್ಣ ಹೆಗಡೆಯವರಿಗೆ ಪತ್ರ

ಹಾಕಿ ಏನಾದರೂ ತಿಳಿಸಿದ್ದಾರೆಯೇ ? ರಾಮಕೃಷ್ಣ ಹೆಗಡೆಯವರು ಬಾಡ ಮೇಲೆ ಹೇಳಿಕೆ ಕೊಡಲಿ. ನಿಜವಾಗಿಯೂ ಹೇಳಿಕೆ ಕೊಡುವುದಾದರೆ ಬಸ್ಸಿನ ದರ, ವಿದ್ಯುಚ್ಛಕ್ತಿ ದರ, ಅಕ್ಕಿ ದರ ಇವುಗಳಿಗೂ ಕೂಡ ಸಂಪೂರ್ಣವಾಗಿ ಹೇಳಿಕೆ ಮಾಡುವುದಕ್ಕೆ

ಶ್ರೀ ಜಿ. ನಾರಾಯಣಕುಮಾರ್.—ಪತ್ರಿಕೆಗಳಲ್ಲಿ ಬಂದಿರತಕ್ಕ ವಿಚಾರವನ್ನು ಪ್ರಸ್ತಾಪ ಮಾಡ ಬಾರದೆಂದು ಇದೆ. ಇದು ಅವರ ಊಹೆ ಇರಬಹುದು...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರಾದ ಡಾ|| ಆಳ್ವರವರು ಬೆಲೆ ಏರಿಕೆಗೆ ಪ್ರಧಾನ ಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ನ್ಯಾಯಬೆಲೆ ಅಂಗಡಿಗಳ ಮುಖಾಂತರ ಮೂರು ರೀತಿ ದರ್ಜೆಯ ಅಕ್ಕಿಯನ್ನು ಕೊಡುತ್ತಿದ್ದೀರಿ. ನಮ್ಮ ಸರ್ಕಾರ ಇದ್ದಾಗಲೂ ಕೂಡ ಕೊಟ್ಟಿದ್ದೇವೆ. ಆರ್ಡಿನರಿ, ಫೈನ್ ಮತ್ತು ಸೂಪರ್‌ಫೈನ್ ಅಕ್ಕಿಯನ್ನು ಕೊಡಲಾಗುತ್ತಿದೆ. ಕೆ.ಜಿ. ಅಕ್ಕಿಗೆ ೧ ರೂಪಾಯಿ ೯೦ ಪೈಸೆ ಇತ್ತು. ನೀವು ಕೆ.ಜಿ. ಯೊಂದಕ್ಕೆ ೨ ರೂಪಾಯಿ ಮಾಡಿದ್ದೀರಿ. ಫೈನ್ ವರೈಟಿ ಅಕ್ಕಿಯ ಬೆಲೆಯನ್ನು ಏರಿಸಿ ಅದಕ್ಕೊಂದು ಕಾರಣವನ್ನು ಕೊಟ್ಟಿದ್ದೀರಿ. ಕೆ.ಜಿ. ಅಕ್ಕಿ ೨ ರೂಪಾಯಿ ೧೦ ಪೈಸೆ ಇದ್ದದನ್ನು ೨ ರೂಪಾಯಿ ೭೫ ಪೈಸೆಗೆ ಏರಿಸಿದ್ದೀರಿ. ಕೇಂದ್ರ ಸರ್ಕಾರದ ಆಹಾರ ನಿಗಮದವರು ಒಂದು ಕ್ವಿಂಟಾಲ್ ಅಕ್ಕಿಗೆ ೯ ರೂಪಾಯಿ ಚಿಲ್ಲರೆ ಜಾಸ್ತಿಮಾಡಿದ್ದಾರೆ, ಅದಕ್ಕಾಗಿ ನಾವು ಕೂಡ ಜಾಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಪುನಃ ಜನಗಳನ್ನು ತಪ್ಪುದಾರಿಗೆ ಎಳೆಯುವಂತಹ ಕೆಲಸ. ಕೇಂದ್ರ ಸರ್ಕಾರದವರು ೯ ರೂಪಾಯಿ ಚಿಲ್ಲರೆ ಒಂದು ಕ್ವಿಂಟಾಲ್ ಅಕ್ಕಿಗೆ ಜಾಸ್ತಿ ಮಾಡಿರತಕ್ಕದ್ದು ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ರೈತರಿಗೆ ಬೆಂಬಲ ಬೆಲೆ ಕೊಡುವುದ ಕ್ಕೋಸ್ಕರ ಅವರು ಜಾಸ್ತಿ ಮಾಡಿದ್ದಾರೆ. ಆ ರೀತಿ ಅವರು ಪ್ರಕಟಮಾಡಿದ್ದಾರೆ. ೧ ರೂಪಾಯಿ ೯೦ ಪೈಸೆ ಒಂದು ಕೆ.ಜಿ. ಅಕ್ಕಿಗೆ ಇದ್ದ ಬೆಲೆಯನ್ನು ನೀವು ೨ ರೂಪಾಯಿ ಮಾಡಿದ್ದೀರಿ. ಫೈನ್ ಮತ್ತು ಸೂಪರ್‌ಫೈನ್ ಅಕ್ಕಿಯ ದರವನ್ನು ೪೦ ಪೈಸೆ, ೪೫ ಪೈಸೆ ಕೆಲವು ಕಡೆಗಳಲ್ಲಿ ೭೦ ಪೈಸೆ. ೮೦ ಪೈಸೆ ಕೆ.ಜಿ ಯೊಂದಕ್ಕೆ ಜಾಸ್ತಿ ಮಾಡಿದ್ದೀರಿ. ನೀವು ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿಯ ದರವನ್ನು ಜಾಸ್ತಿಮಾಡಿ ಭಾರತ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೀರಿ. ೯ ರೂಪಾಯಿ ಚಿಲ್ಲರೆ ಜಾಸ್ತಿ ಯಾದರೆ ನೀವು ೧೦ ರೂಪಾಯಿ ಮಾಡಿ, ಅದನ್ನು ಬಿಟ್ಟು ಕೆ.ಜಿ. ಯೊಂದಕ್ಕೆ ೫೫ ಪೈಸೆ ೪೦ ಪೈಸೆ, ೪೫ ಪೈಸೆ ಜಾಸ್ತಿ ಮಾಡಿದ್ದೀರಿ, ಇದರಲ್ಲಿ ಯಾವ ತರ್ಕ ಇದೆ ? ಪಟ್ಟಣ ಮತ್ತು ಹಳ್ಳಿಗಳಲ್ಲಿ ಸಾಮಾನ್ಯ ಅಕ್ಕಿಯನ್ನು ಸಂಪೂರ್ಣವಾಗಿ ಕೊಡುವುದಕ್ಕೆ ನಿಮ್ಮಿಂದ ಆಗಿಲ್ಲ. ಅಸತ್ಯವಾಗಿರತಕ್ಕ ಅಂಕಿಅಂಶಗಳನ್ನು ಕೊಟ್ಟು ಜನಗಳನ್ನು ತಪ್ಪುದಾರಿಗೆ ಎಳೆಯುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ಆ ದೃಷ್ಟಿಯಿಂದ ಮಾನ್ಯ ಸಚಿವರಾದ ಡಾ|| ಆಳ್ವರವರು ಜವಾಬ್ದಾರಿಯಿಂದ ಇರಬೇಕೆಂದು ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಪ್ರಧಾನಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆಂದು. ಹೇಳಿಕೆ ಕೊಟ್ಟಿದ್ದಾರೆ. ಬಸ್ಸಿನ ದರ ವಿದ್ಯುಚ್ಛಕ್ತಿ ದರ ಏರಿಸಿದ್ದೀರಿ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏರಿಸಿರತಕ್ಕ ಬಸ್‌ನ ದರ ವಿದ್ಯುಚ್ಛಕ್ತಿ ದರದ ವಿಚಾರದಲ್ಲಿ ಜನರಲ್ಲಿ ತಪ್ಪು ಕಲ್ಪನೆ ಬರತಕ್ಕ ರೀತಿಯಲ್ಲಿ ಕೊಟ್ಟಿದ್ದೀರೆಂದು ನನ್ನ ಮಾತನ್ನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಈ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿಸಬೇಕೆಂದು ಹೇಳುತ್ತಿದ್ದೇನೆ. ಯಾರೇ ಮಂತ್ರಿಗಳಾಗಲಿ, ಹೇಳಿಕೆಯನ್ನು ಕೊಡತಕ್ಕವರು, ಪ್ರಧಾನಿಯವರು ಹೇಳಿದರು ಎಂಬುದಾಗಿ ಹೇಳಿಕೆಯನ್ನು ಕೊಡುವಂತಹ ಸಂದರ್ಭದಲ್ಲಿ ಜವಾಬ್ದಾರಿಯಿಂದ ಹೇಳಿಕೆಯನ್ನು ಕೊಡಬೇಕು. ರಾಜ್ಯಪಾಲರ ಭಾಷಣ ಅರ್ಥಾತ್ ಸರ್ಕಾರಿ ಭಾಷಣವಾಗಿದೆ. ಬೆಂಗಳೂರಿನ ಜನರಿಗೆ ನೀರು ಕೊಡತಕ್ಕ ವಿಚಾರವಾಗಿರಬಹುದು. ಹಳ್ಳಿಗಾಡಿ ನಲ್ಲಿರುವ ಜನರಿಗೆ ನೀರು ಕೊಡುವಂತಹ ಪ್ರಶ್ನೆ ಇರಬಹುದು, ಯಾವುದೇ ಪ್ರಶ್ನೆ ಇರಬಹುದು, ಸಮಾಜದಲ್ಲಿ ಇರತಕ್ಕ ದುರ್ಬಲವರ್ಗದವರಿಗೆ ನೀಡತಕ್ಕ ಸೌಕರ್ಯದ ಪ್ರಶ್ನೆ ಇರಬಹುದು. ಅದರ ವಿವರಗಳಿಗೆ ನಾನು ಈಗ ಹೋಗುವುದಿಲ್ಲ. ಹಣಕಾಸಿನ ವಿಚಾರ ಬಂದಾಗ ಆ ಬಗ್ಗೆ ಹೇಳುತ್ತೇವೆ. ರಾಜ್ಯಪಾಲರ ಭಾಷಣ ಏನಿದೆ ಅದು ಸಂಪೂರ್ಣವಾಗಿ ಸರ್ಕಾರದಲ್ಲಿರತಕ್ಕ ನ್ಯೂನತೆಗಳನ್ನು ಬೆಳಕಿಗೆ ತರತಕ್ಕ ವಿಚಾರಧಾರೆಯನ್ನು ತೋರಿಸುವುದರಲ್ಲಿ ಅದು ಸಂಪೂರ್ಣವಾಗಿ ವಿಫಲವಾಗಿದೆ. ಸಮಸ್ಯೆಗಳಿಗೆ ಪರಿಹಾರವನ್ನು ಸೂಚನೆ ಮಾಡತಕ್ಕದ್ದರಲ್ಲೂ ಅದು ವಿಫಲವಾಗಿದೆ. ಈ ಎರಡು ವರ್ಷದ ಅವಧಿಯಲ್ಲಿ ಕರ್ನಾಟಕ ರಾಜ್ಯದ ನೀರಾವರಿ, ವಿದ್ಯುಚ್ಛಕ್ತಿ ಈ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ

ತರತಕ್ಕ ವಿಚಾರ ಅದು ಇರಬಹುದು, ಯೋಜನೇತರ ವೆಚ್ಚ ಇರಬಹುದು. ಇವುಗಳೆಲ್ಲದರಲ್ಲೂ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಆ ಒಂದು ಕಾರಣದಿಂದ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡುತ್ತಾ ನನಗೆ ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅರ್ಧ ಗಂಟೆಯ ಚರ್ಚೆ. ಜನತಾ ಗೃಹ ನಿರ್ಮಾಣದ ಬಗ್ಗೆ

SPEAKER.–SRI. K.H. SRINIVAS to raise half-an-hour discussion regarding "Janatha Housing Scheme" arising out of the replies to Short Notice Question No. 1 (2).

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಅಲ್ಪ ಕಾಲಾವಧಿಯ ಪ್ರಶ್ನೆಗೆ ಸಾರಿಗೆ ಸಚಿವರಾದ ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯ ರವರ ಈ ಸದನದಲ್ಲಿ ಅಂಕಿ ಸಂಖ್ಯೆಗಳನ್ನಿಟ್ಟು ಉತ್ತರವನ್ನು ಕೊಟ್ಟಿದ್ದಾರೆ ಹಾಗೂ ಕಳೆದ ಮೂರು ವರ್ಷಗಳಲ್ಲಿ ಈ ರಾಜ್ಯದಲ್ಲಿ ಜನತಾ ಗೃಹ ನಿರ್ಮಾಣ ಯೋಜನೆ ಸ್ಥಗಿತಗೊಂಡಿರತಕ್ಕ ಶುದ್ಧವಾದ ವಿಚಾರ ಎಂದು ಹೇಳಿ ಅದನ್ನು ಅವರು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಅವರ ಪ್ರಮಾಣಿಕತನಕ್ಕೆ ನನ್ನ ಮೆಚ್ಚುಗೆಯನ್ನು ಸೂಚನೆ ಮಾಡುತ್ತೇನೆ. ಆದರೆ ಸರ್ಕಾರ ಅದರ ಬಗ್ಗೆ ತಾಳಿರತಕ್ಕ ಯಾವ ತಾತ್ಸಾರ ಕಾರಣ ಅಲ್ಲ ಎಂದು ಹೇಳಿ ಅದರ ಮೇಲೆ ಮುದ್ರೆಯನ್ನು ಒತ್ತಿದ್ದಾರೆ. ಆ ಅಂಕಿ ಸಂಖ್ಯೆಗಳನ್ನು ವಿಶೇಷವಾಗಿ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ಅದು ಈಗಾಗಲೇ ಬಯಲಾಗಿದೆ. ೧೯೭೬-೭೭ ನೇ ಸಾಲಿನಲ್ಲಿ ಮಂಜೂರಾದಂತಹ ಮನೆಗಳು ೭೫,೦೦೦. ಅದೇ ರೀತಿ ೧೯೭೭-೭೮ ಸಾಲಿನಲ್ಲಿ ೫೫,೨೭೫ ಮನೆಗಳು. ಅದೇ ರೀತಿ ೧೯೭೮-೭೯ನೇ ಸಾಲಿನಲ್ಲಿ ೫೫,೯೬೫ ಮನೆಗಳು ಮಂಜೂರಾಗಿವೆ. ಅದರಲ್ಲಿ ಪೂರ್ಣವಾಗಿರತಕ್ಕ ಮನೆಗಳ ಸಂಖ್ಯೆಯೂ ಕೂಡ ಇದೆ. ಅವನ್ನು ಹೇಳುವುದಾದರೆ, ೧೯೭೬-೭೭ರಲ್ಲಿ ಪೂರ್ಣವಾಗಿರತಕ್ಕಂತಹ ಮನೆಗಳ ಸಂಖ್ಯೆ ೩೮,೭೪೭, ಅದೇ ರೀತಿ ೧೯೭೭-೭೮ನೇ ಸಾಲಿನಲ್ಲಿ ಪೂರ್ಣವಾಗಿರತಕ್ಕ ಮನೆಗಳು ಸಂಖ್ಯೆ ೨೮,೭೮೦. ಮತ್ತೆ ೧೯೭೮-೭೯ನೇ ಸಾಲಿನಲ್ಲಿ ಪೂರ್ಣವಾಗಿರತಕ್ಕ ಮನೆಗಳ ಸಂಖ್ಯೆ ಕೇವಲ ೩೫೨, ಇದೇ ರೀತಿಯಲ್ಲಿ ಕಡಿಮೆ ವೆಚ್ಚದ ಜನತಾ ಮನೆಗಳು ಏನಿವೆ ಅದರಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಒಟ್ಟು ಸುಮಾರು ೭೫,೦೦೦ ಮನೆಗಳು ಈಗಾಗಲೇ ಮಂಜೂರಾಗಿದ್ದರೂ ನಿರ್ಮಾಣವಾಗದೆ ಹಾಗೆ ಉಳಿದಿರುವುದು ಮನೆಗಳು ಎಷ್ಟು ಎಂದು ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಹಾಗೂ ಇದೇ ಪ್ರಶ್ನೆಗೆ ಮೇಲ್ಮನೆಯಲ್ಲಿ ಉತ್ತರ ಕೊಡುವಾಗಲೂ ಅದೇ ಮಾತನ್ನು ಮಾನ್ಯ-ಮಂತ್ರಿಗಳು ಹೇಳಿದ್ದಾರೆ. ತಮಗೆ ವಿಶೇಷವಾಗಿ ಹೇಳಬೇಕಾದುದೇನೆಂದರೆ, ಈಗ ಈ ಜನತಾ ಗೃಹ ನಿರ್ಮಾಣ ಯೋಜನೆ ಏನಿದೆ, ಅದು ಯಾವುದೇ ಸರ್ಕಾರವಾಗಿರಲೀ, ನಮ್ಮ ದೇಶದಲ್ಲಿ ಬಡ ಜನರಿಗೆ ಮಾಡಬಹುದಾದ ಅತ್ಯಂತ ಉತ್ತಮವಾದ ಕೆಲಸಗಳಲ್ಲಿ ಇದೂ ಒಂದು. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಅವರು ಈ ದೇಶದ ಬಡ ಜನರ ಪರಿಸ್ಥಿತಿಯ ಬಗ್ಗೆ ಪ್ರಪ್ರಥಮವಾಗಿ ಗಮನ ಹರಿಸಿದ ಕಾಲದಲ್ಲಿ ಆದಂತಹ ೨೦ ಅಂಶಗಳ ಕಾರ್ಯಕ್ರಮಗಳ ಯೋಜನೆಯಡಿಯಲ್ಲಿ ಇದಕ್ಕೆ ಪರಿಹಾರ ದೊರೆಯಿತು, ಕರ್ನಾಟಕ ರಾಜ್ಯದಲ್ಲಿ ದಿವಂಗತ ದೇವರಾಜ್ ಅರಸ್‌ರವರು ಇದ್ದಂತಹ ಕಾಲದಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಿದರು ನಂತರದ ಕಾಂಗ್ರೆಸ್ ಸರ್ಕಾರಗಳು ಅತಿ ಶ್ರದ್ಧೆಯಿಂದ ಇದರ ಬಗ್ಗೆ ಗಮನ ಹರಿಸಿ ಈ ಯೋಜನೆಯನ್ನು ಕಾರ್ಯಗತ ಮಾಡಿಕೊಂಡು ಬಂದವು. ಅದು ತಮಗೂ ಗೊತ್ತಿದೆ. ಇಲ್ಲಿರತಕ್ಕ ಎಲ್ಲರಿಗೂ ಅದು ಗೊತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಬೇಡಿಕೆಯಾಗಿರತಕ್ಕದ್ದು ಈ ಜನತಾ ಗೃಹ ನಿರ್ಮಾಣ ಯೋಜನೆ, ಮನೆ ಎನ್ನತಕ್ಕಂದಹದ್ದು ಮೂಲಭೂತವಾಗಿ ಮನುಷ್ಯ ನಿಲ್ಲುವುದಕ್ಕೆ ಒಂದು ನೆಲೆ ಇದೂ ಇಲ್ಲದೆ ಇರತಕ್ಕವರಿಗೆ ತಮ್ಮದೇ ಆದ ಮನೆಗಳನ್ನು ಮಾಡಿಕೊಳ್ಳಬೇಕೆಂಬ ಒಂದು ಕನಸು ಸಹಜವಾದುದು. ಸಹಜವಾಗಿರತಕ್ಕ ಅಂಶದಲ್ಲಿ ಇದು ಸಹಜವಾದುದು. ಈ ಯೋಜನೆ ನಿಜವಾಗಿಯೂ ಒಂದು ಪವಿತ್ರವಾದ ಯೋಜನೆ. ಮತ್ತು ಬಡವರ ಬಗ್ಗೆ ನಿಜವಾದ ಚಿಂತನೆ ಇದ್ದರೆ ಈ ಯೋಜನೆಯ ಬಗ್ಗೆ